ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಏಪ್ರಿಲ್ ಮತ್ತು ಮೇ ೨೦೦೨ ಸಂಚಿಕೆ ೯ ಮತ್ತು ೧೦

ಕೋಮುಗಲಭೆಗಳ ನಿಯಂತ್ರಣದಲ್ಲಿ ಜನತೆಯ ಪಾತ್ರವಿಲ್ಲವೆ?

★

ಪರಕೀಯತೆ

★

ಕಳ್ಳತನಕ್ಕಾಗಿ ಹುಟ್ಟಿದ್ದು

★

ಪಾಶ್ಚಾತ್ಯರ ಏಕಸಂಸ್ಕೃತಿ ಮತ್ತು ಭಾರತೀಯ ವೈವಿಧ್ಯ

★

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ: ೨ ಸಂಚಿಕೆ: ೯
ಮತ್ತು ೧೦
ಏಪ್ರಿಲ್ ಮತ್ತು ಮೇ ೨೦೦೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ :
೦೮೨೩೬-೬೪೮೭೫೪

ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ !

ಬಾಳಬೇಕೆಂಬ ಜೀವನದ ಹಂಬಲದ
ಮಕ್ಕಳವರು.
ನಿಮ್ಮ ಮೂಲಕ
ಅವರು ಬರಬಹುದು; ಆದರೆ ನಿಮ್ಮಿಂದ
ಬಂದವರಲ್ಲ.
ಅವರು ನಿಮ್ಮೊಂದಿಗಿದ್ದರೂ
ಅವರು ನಿಮ್ಮವರಲ್ಲ. ನೀವು ಅವರಿಗೆ
ನಿಮ್ಮ ಪ್ರೀತಿ ಕೊಡಿ. ಆದರೆ ನಿಮ್ಮ
ವಿಚಾರವನ್ನಲ್ಲ.
ಏಕೆಂದರೆ ಅವರಿಗೆ ಅವರದೇ ಆದ
ವಿಚಾರಗಳಿವೆ.
ನೀವು ಅವರಂತೆ ಆಗಲು ಪ್ರಯತ್ನಿಸ
ಬಹುದು. ಆದರೆ ಅವರನ್ನು ನಿಮ್ಮಂತೆ
ಮಾಡಲು ಪ್ರಯತ್ನಿಸಬೇಡಿ.
ಏಕೆಂದರೆ ಜೀವನವು
ಭೂತಕಾಲದ ಕಡೆ ಮುಖ ಮಾಡಿಲ್ಲ
ಮತ್ತು ಅದು ಸ್ಥಿರವಲ್ಲ.

– **ಖಲೀಲ್ ಜಿಬ್ರಾನ್**

ವಿಚಾರ ದೀಪ್ತಿ.....................

ತಪ್ಪು ಮಾಡುವುದು ಮನುಷ್ಯನ ಸ್ವಭಾವ; ಆ ಬಗ್ಗೆ ಬೇರೆಯವರನ್ನು ದೂಷಿಸುವುದು ರಾಜಕಾರಣ.

ಯಾವ ವ್ಯಕ್ತಿಗೆ ಏನು ಅನುಭವ ಆಗುತ್ತದೆ ಎಂಬುದಲ್ಲ; ಆ ಬಗ್ಗೆ ಅವನು ಏನು ಮಾಡುತ್ತಾನೆ ಎಂಬುದು.

ನಿಮ್ಮ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳಿರಿ. ನಿಮ್ಮ ಜೊತೆಯವರೂ ಹಾಗೆಯೇ ಮಾಡುವಂತೆ ಪ್ರೋತ್ಸಾಹಿಸಿ. ಕೋಪಿಸಿಕೊಳ್ಳಬೇಡಿ. ಮಕ್ಕಳು ಬೀಳುವುದರ ಮೂಲಕವೇ ನಡೆಯುವುದನ್ನು ಕಲಿಯುತ್ತವೆ. ಮಗು ಬಿದ್ದಾಗಲೆಲ್ಲ ನೀವು ಹೊಡೆದರೆ ಅದು ನಡೆಯುವುದನ್ನು ಕಲಿಯಲು ಬಯಸುವುದೇ ಇಲ್ಲ.

ಈ ಪ್ರಪಂಚದಲ್ಲಿ ಸ್ವಪ್ರಯತ್ನದಿಂದ ಮುಂದೆ ಬಂದಿರುವ ಜನರಿಗಿಂತ ಸ್ವಯಂಕೃತ ಅಪರಾಧಗಳಿಂದ ಹಿಂದುಳಿದವರೇ ಹೆಚ್ಚು.

ಸಮಾಜವೆಂಬುದು ಪುಸ್ತಕಗಳ ಕುದಿತದಿಂದಾದ ಒಂದು ಲೇಹ. ಓದಲು ಯೋಗ್ಯವಾದ ಸಾಹಿತ್ಯದಿಂದ ಅದು ತನಗೆ ಬೇಕಾದ ಒಳ್ಳೆಯ ಗುಣಗಳನ್ನು ಪಡೆಯುತ್ತದೆ. ಹೇಗೆ ಬಿಸಿ ನೀರು ಚಹಾ ಎಲೆಗಳಿಂದ ಶಕ್ತಿ ಪಡೆಯುತ್ತದೋ ಹಾಗೆ.

ಪುಸ್ತಕಗಳು ಯೌವನದ ಆಹಾರ. ವೃದ್ಧರಿಗೆ ವೃಧ್ಯಾಪದ ಆನಂದ. ಅಭಿವೃದ್ಧಿಯ ಶೃಂಗಾರ. ಕಷ್ಟಗಳಲ್ಲಿ ನೆಮ್ಮದಿಯ ತಾಣ, ಮನೆಯಲ್ಲಿಯ ಸಂತೋಷ. ವಿದೇಶಗಳಲ್ಲಿ ನಿರಾಂತಕ: ರಾತ್ರಿಯಲ್ಲಿ, ಪ್ರವಾಸದಲ್ಲಿ ಜೊತೆಗಾರ.

ನಿಮ್ಮನ್ನು ಗರಿಷ್ಠ ಚಿಂತನೆಗೆ ಹಚ್ಚುವ ಪುಸ್ತಕಗಳೇ ನಿಮಗೆ ಅತ್ಯಂತ ನೆರವಾಗುವ ಪುಸ್ತಕಗಳು.

ನಿಮ್ಮ ಒಪ್ಪಿಗೆಯಿಲ್ಲದೆ ಯಾರೂ ನಿಮ್ಮನ್ನು ಕೀಳಾಗಿ ಭಾವಿಸಲು ಸಾಧ್ಯವಿಲ್ಲ.

ಕೋಮುಗಲಭೆಗಳು ಮತ್ತು ಜನತೆ

ಗುಜರಾತ್ ರಾಜ್ಯದಲ್ಲಿ ಕಳೆದ ಮೂರು ತಿಂಗಳಿಂದ ಕೋಮು ಗಲಭೆಗಳು ಅವ್ಯಾಹತವಾಗಿ ನಡೆದಿವೆ. ಅಲ್ಲಿ ಇದುವರೆಗೆ ಸಾವಿರಕ್ಕೂ ಹೆಚ್ಚು ಜನ ಹತಗೊಂಡಿದ್ದಾರೆ. ಇವರಲ್ಲಿ ಮಕ್ಕಳೂ, ಸ್ತ್ರೀಯರೂ, ವಯಸ್ಸಾದವರೂ ಸೇರಿದ್ದಾರೆ. ಇಡೀ ರಾಜ್ಯ ಮಿಲಿಟರಿ ಹಾಗೂ ಪೋಲಿಸರ ಗಸ್ತಿನಲ್ಲಿದೆ; ಅಲ್ಲಲ್ಲಿ ಕರ್ಫ್ಯೂ ಜಾರಿಯಲ್ಲಿದೆ. ಸ್ವತಂತ್ರ ಭಾರತದ ಇತ್ತೀಚಿಗಿನ ವರ್ಷಗಳಲ್ಲಿ ಅತ್ಯಂತ ವ್ಯಾಪಕವಾದ ಹಾಗೂ ಭೀಕರವಾದ ಗಲಭೆ ಇವುಗಳಾಗಿವೆ. ಗುಜರಾತದ ಈ ಘಟನೆಗಳು ಇಡೀ ದೇಶಕ್ಕೆ ಅವಮಾನಕರವಾದವೂ ನಾಚಿಕೆಗೇಡಿತನವೂ ಎಂದು ಎಲ್ಲ ನಾಯಕರು ಬಣ್ಣಿಸಿದ್ದಾರೆ. ಇದುವರೆಗೆ ಸುಮಾರು ೨೦೦ ಕೋಟಿ ರೂಪಾಯಿಗಳಷ್ಟು ನಷ್ಟ ಉಂಟಾಗಿದೆ, ೫೦,೦೦೦ ಜನರು ನಿರ್ಗತಿಕರಾಗಿದ್ದಾರೆ. ಕೋಮುಗಲಭೆಕಾರರು ತಮ್ಮ ಎದುರಾಳಿಗಳನ್ನು ಸಾಯಿಸಿದ ಬಗೆಗಳು ಅಮಾನುಷಕರವಾಗಿವೆ. ಮನುಷ್ಯನು ಎಂಥ ಕೀಳು ಮಟ್ಟಕ್ಕೆ ಇಳಿಯುತ್ತಾನೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಅಷ್ಟು ಕೀಳು ಮಟ್ಟಕ್ಕೆ ಇಳಿದು ಅಮಾಯಕ ಜನರನ್ನು ಸಾಯಿಸಿದ್ದಾನೆ. ಅಲ್ಲಿಂದ ಮಿಲಿಟರಿ ಪಡೆಯನ್ನು ಸಧ್ಯಕ್ಕೆ ಹಿಂದೆಗೆಯಬಾರದೆಂದು ಅಲ್ಲಿಯ ಜನ ಬೇಡಿಕೊಳ್ಳುತ್ತಿದ್ದಾರೆ ಇಂಥ ದಾರುಣ ಪರಿಸ್ಥಿತಿ ದೇಶದ ಒಂದು ಭಾಗದಲ್ಲಿರುವಾಗ ದೇಶದ ಉಳಿದ ಜನತೆಯು ಯಾವುದೇ ಗಲಭೆಗಳು ಉಂಟಾದಾಗ ಅವುಗಳನ್ನು ಹತ್ತಿಕ್ಕುವ ಕೆಲಸ ಸರಕಾರದ್ದು ಎಂಬ ಭಾವನೆ ಜನರಲ್ಲಿದೆ ಮತ್ತು ಸರ್ಕಾರವು ಆ ಗಲಭೆಗಳನ್ನು ತನ್ನ ಬಳಿ ಇರುವ ಮಿಲಿಟರಿ ಹಾಗೂ ಪೋಲಿಸರ ಬಲದಿಂದ ಹತ್ತಿಕ್ಕಬಹುದೆಂಬ ಭಾವನೆ ಸರಕಾರಕ್ಕಿದೆ. ಹೆಚ್ಚು-ಹೆಚ್ಚು ಮಿಲಿಟರಿ ಬಲವನ್ನು ಉಪಯೋಗಿಸಿದಷ್ಟೂ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದೆ ಎಂದು ಭಾವಿಸಲಾಗುತ್ತದೆ. ಎಷ್ಟೋ ಸಲ ಈ ಮಿಲಿಟರಿ ಪಡೆಯೇ ಹಾಗೂ ಪೋಲಿಸರೇ ರಾಕ್ಷಸರಾಗಿ ವರ್ತಿಸುತ್ತಾ ಇನ್ನೂ ಹೆಚ್ಚು ಜನರು ಸಾಯುವುದಕ್ಕೂ ಮತ್ತು ನಿರ್ಗತಿಕರಾಗುವುದಕ್ಕೂ ಕಾರಣರಾಗುತ್ತಾರೆ. ಮಾನವನ ಎಲ್ಲ ಮೂಲಭೂತ ಹಕ್ಕುಗಳೂ ಮಣ್ಣು ಪಾಲಾಗುತ್ತವೆ. ಈ ಸಂಗತಿ ಕೇವಲ ಇತ್ತೀಚಿಗಿನದಲ್ಲ; ನಮ್ಮ ದೇಶದಲ್ಲಿ ಕಳೆದ ಐವತ್ತು ವರ್ಷಗಳಿಂದ ನಡೆದ ಎಲ್ಲ ಗಲಭೆಗಳ ಸಂಗತಿಯೂ ಇದೇ ಆಗಿದೆ. ಪಾಕಿಸ್ತಾನ ಹಾಗೂ ಚೀನಾ ದೇಶಗಳೊಡನೆ ನಡೆದ ಯುದ್ಧಗಳಲ್ಲಿ ಸತ್ತವರ ಸಂಖ್ಯೆಗಿಂತ ಕೋಮುಗಲಭೆಗಳಲ್ಲಿ ಸತ್ತವರ ಸಂಖ್ಯೆ ಹೆಚ್ಚಾಗಿದೆ, ಆದ ನಷ್ಟವೂ ಸಹ ಎಷ್ಟೋ ಬಿಲಿಯನ್‌ಗಳಷ್ಟು. ಪರಿಸ್ಥಿತಿ ಇಷ್ಟು ಗಂಭೀರವಾಗಿರುವಾಗ ಆ ಪರಿಸ್ಥಿತಿಯ ಕುರಿತು ದೇಶದ ಸಾಮಾನ್ಯ ಜನತೆಯ ಕರ್ತವ್ಯವೇನು, ಆದರ

ಪ್ರತಿಕ್ರಿಯೆಯೇನು, ಸಮಸ್ಯೆಯ ನಿವಾರಣೆಯಲ್ಲಿ ಅದರ ಪಾತ್ರವೇನು ಈ ಮುಂತಾದ ವಿಷಯಗಳ ಬಗ್ಗೆ ಗಂಭೀರವಾದ ಚಿಂತನೆ ನಡೆಯಬೇಕಾಗಿದೆ, ಈ ಸಮಸ್ಯೆಯ ಪರಿಹಾರ ಸರ್ಕಾರಕ್ಕೆ ಸೇರಿದ್ದು ಎಂದು ಜನತೆಯೂ, ಈ ಸಮಸ್ಯೆ ಕಾನೂನು ಮತ್ತು ಸುವ್ಯವಸ್ಥೆಯ ವಿಷಯವೆಂದು ಸರ್ಕಾರವೂ ಭಾವಿಸಿಕೊಂಡು ಕುಳಿತುಕೊಂಡರೆ ಕೋಮುಗಲಭೆಗಳ ಸಮಸ್ಯೆಗೆ ಪರಿಹಾರವೇ ಸಿಗಲಿಕ್ಕಿಲ್ಲ. ಇನ್ನು ಮುಂದೆಯೂ ಎಷ್ಟೋ ವರ್ಷಗಳ ಕಾಲ ಮುಂದು ವರಿಯಬಹುದು ಮತ್ತು ಜನಸಾಮಾನ್ಯರು ಹತರಾಗುತ್ತ ಹೋಗಬಹುದು. ಕೋಮುಗಲಭೆ ಎಂಬುದು ಯಾವುದೋ ಎರಡು ಕೋಮುಗಳ ನಡುವಿನ ಗಲಭೆ ಎಂದು ತಿಳಿಯದೆ ಇದೊಂದು ರಾಷ್ಟ್ರೀಯ ಸಮಸ್ಯೆ, ಇಡೀ ಸಮಾಜದ ಸಮಸ್ಯೆ ಎಂದು ತಿಳಿಯಬೇಕಾಗಿದೆ. ದುರ್ದೈವದ ಸಂಗತಿಯೇನೆಂದರೆ ಕೋಮು ಗಲಭೆಗಳ ಭೀತಿಯ ಕಾರಣದಿಂದ ದೇಶದ ವಿಭಜನೆಯಾಯಿತಾದರೂ ಭಾರತೀಯ ಸಾಮಾನ್ಯ ಜನತೆ ಕೋಮುಗಲಭೆಗಳ ವಿಷಯವಾಗಿ ಇದುವರೆಗೂ ಯಾವ ಆತಂಕಕ್ಕೂ ಒಳಗಾಗಿಲ್ಲ ಮತ್ತು ಅದರ ಪರಿಹಾರದ ಹೊಣೆ ತನ್ನ ಮೇಲೆಯೂ ಇದೆ ಎಂದು ಇದುವರೆಗೂ ಭಾವಿಸಿಲ್ಲ. ವಿಚಿತ್ರ ಸಂಗತಿಯೇ ನೆಂದರೆ ಕೋಮುಗಲಭೆಗಳು ಹೆಚ್ಚಾದಷ್ಟೂ, ಅವುಗಳ ಪರಿಣಾಮ ವ್ಯಾಪಕಾ ದಷ್ಟೂ ಜನತೆ ಅವುಗಳ ಬಗ್ಗೆ ದಿವ್ಯ ಉದಾಸೀನತೆಯನ್ನು ಬೆಳೆಸಿಕೊಂಡು ಹೋಗುತ್ತಿದ. ನಮ್ಮ ದೇಶದ ಇತ್ತೀಚಿಗಿನ ಇತಿಹಾಸವನ್ನು ಪರೀಶೀಲಿಸಿದರೆ ದೇಶದಲ್ಲಿ ಕೋಮುಗಲಭೆಗಳ ದಳ್ಳುರಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆದಿ ವೆಯೇ ವಿನಃ ಕೋಮು ಸೌಹಾರ್ದತೆಯ ಸ್ಥಾಪನೆಗಾಗಿ ಗಂಭೀರವಾದಹಾಗೂ ರಚನಾತ್ಮಕವಾದ ಪ್ರಯತ್ನಗಳು ನಡೆದೇ ಇಲ್ಲವೆಂದು ಸ್ಪಷ್ಟವಾಗಿಗೊತ್ತಾಗುತ್ತದೆ.

ಕೋಮು ಗಲಭೆಗಳಿಗೆ ಮೂಲ ಕಾರಣ ಧರ್ಮಾಂಧತೆ. ಧರ್ಮಾಂಧತೆ ಯನ್ನು ತಮ್ಮ ಸ್ವಾರ್ಥಕ್ಕಾಗಿ ಹೆಚ್ಚಾಗಿ ಬಳಸಿಕೊಂಡವರು ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು. ದೇಶದ ವಿಭಜನೆಗೆ ಎಷ್ಟೋ ಕಾಲ ಮೊದಲೇ ಪ್ರಾರಂಭವಾದ ಧರ್ಮಾಂಧತೆಯ ದುರುಪಯೋಗದ ರಾಜಕಾರಣ ಅಯೋಧ್ಯೆ ಯಲ್ಲಿ ಶ್ರೀರಾಮಮಂದಿರ ನಿರ್ಮಾಣದ ಸಮಸ್ಯೆಯವರೆಗೂ ನಡೆದುಕೊಂಡು ಬಂದಿದೆ. ದೇಶದ ಸಾಮಾನ್ಯ ಜನತೆ ಈ ವಿಷಯದಲ್ಲಿ ರಾಜಕೀಯ ಪಕ್ಷಗಳ ಕೈಗೊಂಬೆಯಾಗಿ ವರ್ತಿಸುತ್ತ ಬಂದಿದೆ. ರಾಜಕೀಯ ಪಕ್ಷಗಳು ಕೋಮು ಭಾವನೆಯನ್ನು ಚುನಾವಣೆಗಳಲ್ಲಿ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಾ ಬಂದಿವೆ. ಯಾವ ಚುನಾವಣೆಯ ಕಾಲದಲ್ಲೂ, ಎಂದೂ, ಈ ಜನತೆ ತಟಸ್ಥ ವಾಗಿದ್ದು ಕೊಂಡು ಕೋಮು ರಾಜಕಾರಣದಿಂದ ಹೊರಗೆ ಬರುವ ಅವಶ್ಯಕತೆ ಕುರಿತು ಸಂಘಟಿತವಾಗಿ ಆಲೋಚನೆ ಮಾಡಿಲ್ಲ ಮತ್ತು ಈಗಲೂ ಸಹ

ಆಲೋಚನೆ ಮಾಡುವ ಸಾಧ್ಯತೆಗಳು ಕಾಣುತ್ತಿಲ್ಲ. ಪ್ರಜಾಸತ್ತಾತ್ಮಕ ರಾಜ್ಯ ವ್ಯವಸ್ಥೆಯಲ್ಲಿ ದೇಶದ ಪ್ರಜೆ ತನ್ನ ಸುತ್ತಲೂ ಹರಡಿರುವ ಕೋಮು ದಳ್ಳುರಿಯ ಕಾರಣಗಳ ಬಗ್ಗೆ ಉದಾಸೀನವಾಗಿಯೂ, ನಿಷ್ಕ್ರಿಯವಾಗಿಯೂ, ದಿಗ್ಭ್ರಾಂತ ವಾಗಿಯೂ ಉಳಿದು ಬಿಟ್ಟರೆ ದೇಶಕ್ಕೆ ಒಳ್ಳೆಯ ಭವಿಷ್ಯ ಇರಲಾರದು.

ಆದ್ದರಿಂದ ಕೋಮು ಗಲಭೆಗಳಿಗೆ ಕಾರಣಗಳೇನು ಮತ್ತು ಅವು ಸಂಭವಿಸದಂತೆ ಜನತೆ ತನ್ನ ಹಂತದಲ್ಲಿ ಏನು ಮಾಡಬೇಕು ಈ ಮುಂತಾದ ವಿಚಾರಗಳ ಬಗ್ಗೆ ಜನತೆ ಸ್ವತಃ ಯೋಚನೆಮಾಡಲು ಪ್ರಾರಂಭಿಸಬೇಕು. ಅಂದರೆ ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಯೋಚನೆಮಾಡಬೇಕು. ಮುಖ್ಯವಾಗಿ ಈ ದೇಶದ ಯುವಕರು ಮತ್ತು ವಿದ್ಯಾರ್ಥಿಗಳು ಯೋಚನೆ ಮಾಡಬೇಕು. ಅಲ್ಲಲ್ಲಿ ಮತ್ತು ಮುಖ್ಯವಾಗಿ ವಿವಿಧ ಕೋಮುಗಳ ಜನರು ಹೆಚ್ಚಾಗಿರುವ ಸ್ಥಳಗಳಲ್ಲಿ ಸಣ್ಣ - ಸಣ್ಣ ಪ್ರಮಾಣದ ಸೌಹಾರ್ದತಾ ಸಮಿತಿ ಮತ್ತು ಅವುಗಳ ಕೆಲಸಕ್ಕೆ ಪೂರಕವಾಗುವಂತೆ ಶಾಂತಿಸೈನ್ಯದ ಘಟಕಗಳನ್ನು ರಚಿಸಿಕೊಂಡು ಆಯಾ ಸ್ಥಳಗಳಲ್ಲಿರಬಹುದಾದ ಸಮಸಾತ್ಮಕ ವಿಷಯಗಳ ಬಗ್ಗೆ ಗಮನಹರಿಸಿ ಅವುಗಳ ನಿವಾರಣೆಗಾಗಿ ಪ್ರಯತ್ನಿಸಬೇಕು. ಇದು ನಿರಂತರವಾಗಿ ನಡೆಯಬೇಕಾದ ಕೆಲಸ. ಈ ಸಂಘಟನೆಗಳಲ್ಲಿ ಕೋಮು ರಾಜಕಾರಣ ಪ್ರವೇಶಿಸದಂತೆ ಎಚ್ಚರಿಕೆವಹಿಸಬೇಕು. ಆಗಾಗ್ಗೆ ಈ ಸೌಹಾರ್ದತಾ ಸಮಿತಿಗಳ ಆಶ್ರಯದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯಬೇಕು. ಚುನಾವಣಾ ಸಮಯದಲ್ಲಿ ಈ ಸಮಿತಿಗಳು ಸಕ್ರಿಯವಾಗಿದ್ದು ಕೊಂಡು ಆಯಾ ಪ್ರದೇಶದಲ್ಲಿಯ ಜನರು ಕೋಮು ರಾಜಕಾರಣದ ವಿಚಾರಗಳಿಗೆ ಬಲಿಯಾಗ ದಂತೆ ಪ್ರತಿ ಚಳುವಳಿಯನ್ನು ನಡೆಸಬೇಕು. ಇಂಥ ಕೆಲಸಗಳು ಸಮಾಜದಲ್ಲಿ ಸದಾ ನಡೆಯುತ್ತಿದ್ದರೆ ಮಾತ್ರ ಗುಜರಾತನಲ್ಲಿ ಸಂಭವಿಸಿರುವಂಥ ಕೋಮು ಗಲಭೆಗಳನ್ನು ತಡೆಯಲು ಸಾಧ್ಯ. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸವನ್ನು ಮಾಡಲು ಹೇಗೆ ಸಾಧ್ಯವಿಲ್ಲವೋ ಹಾಗೆ ಕೋಮುಗಲಭೆಗಳು ಉಂಟಾದಾಗ ಕೋಮು ಸೌಹಾರ್ದತೆಯ ಕೆಲಸವನ್ನು ಮಾಡಲು ಸಾಧ್ಯವಿಲ್ಲ ನಮ್ಮ ದೇಶದ ಜನತೆ ಹಾಗೂ ಸರ್ಕಾರ ಕೋಮು ಸೌಹಾರ್ದತೆಯ ವಿಷಯವನ್ನು ಗಂಭೀರ ವಾಗಿ ಇದುವರೆಗೂ ಪರಿಗಣಿಸಲೇ ಇಲ್ಲ; ಇದೊಂದು ರಾಷ್ಟ್ರೀಯ ಸಮಸ್ಯೆ ಯೆಂದು ಭಾವಿಸಲೇ ಇಲ್ಲ. ಈ ವಿಷಯವನ್ನು ಪೋಲಿಸ್ ಮತ್ತು ಮಿಲಿಟರಿ ಹಾಗೂ ನ್ಯಾಯಸ್ಥಾನಗಳಿಗೆ ಬಿಟ್ಟು ಕೊಡಲಾಯಿತೇ ವಿನಃ ಈ ವಿಷಯ ನೇರವಾಗಿ ಜನತೆಗೆ ಸಂಬಂಧಿಸಿದ್ದು ಮತ್ತು ಜನತೆಯೇ ಈ ಜವಾಬ್ದಾರಿ ಯನ್ನು ತೆಗೆದುಕೊಳ್ಳಬೇಕೆಂಬ ಜಾಗೃತಿಯನ್ನುಂಟು ಮಾಡುವ ಕೆಲಸವನ್ನು ಮಹಾತ್ಮಾ ಗಾಂಧೀಜಿಯವರ ನಂತರ ಯಾರೂ ಕೈಗೆತ್ತಿಕೊಳ್ಳಲೇ ಇಲ್ಲ.

ರಾಜಕೀಯ ಕಾರಣದಿಂದ ಹುಟ್ಟಿದ ಕೋಮು ಭಾವನೆಯನ್ನು ರಾಜಕಾರಣ ದಿಂದಲೇ ಬಗೆಹರಿಸುವ ಪ್ರಯತ್ನ ಇದುವರೆಗೂ ನಡೆದಿದೆ. ಆದರೆ ಈ ಸಮಸ್ಯೆಯು ರಾಜಕಾರಣದ ಶಕ್ತಿಗೂ ಮತ್ತು ಅದರ ವ್ಯಾಪ್ತಿಗೂ ಮೀರಿದ ಸಮಸ್ಯೆಯಾಗಿದೆ ಎಂಬ ಅರಿವು ನಮ್ಮ ರಾಜಕೀಯ ಮುಖಂಡರಿಗೆ ಆಗದೇ ಇರುವುದು ದುರ್ದೈವದ ಸಂಗತಿ. ಆದ್ದರಿಂದ ಈ ಮಹತ್ವದ ಸಮಸ್ಯೆಯ ಪರಿಹಾರವನ್ನು ಜನತೆ ತನ್ನ ಹಿತಕ್ಕಾಗಿಯಾದರೂ, ತನ್ನ ಸುರಕ್ಷತೆಗಾಗಿಯಾದರೂ ಕೈಗೈತ್ತಿಕೊಳ್ಳಬೇಕಾದ ಅಗತ್ಯ ಮತ್ತು ಸಂದರ್ಭ ಈಗ ಬಂದಿದೆ. ಆದರೆ ಈ ವಿಷಯದಲ್ಲಿ ಜನರನ್ನು ಜಾಗ್ರತಗೊಳಿಸುವ ನಾಯಕ ನಮ್ಮ ಮಧ್ಯದಲ್ಲಿ ಇಲ್ಲ. ದೇಶದ ಇತಿಹಾಸದಲ್ಲಿ ಕೆಲವೊಂದು ಸಲ ನಾಯಕರಿಲ್ಲದೆ, ಜನತೆಯೇ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಕಾಲ ಬರುತ್ತದೆ. ಅಂಥ ಕಾಲ ಇದಾಗಿದೆ. ಇಡೀ ದೇಶಕ್ಕೆ ಅಥವಾ ಸಮುದಾಯಕ್ಕೆ ನೇತೃತ್ವ ಕೊಡಬಲ್ಲ ನಾಯಕನಿಲ್ಲದಿದ್ದರೂ ಚಿಕ್ಕ-ಚಿಕ್ಕ ಕ್ಷೇತ್ರಗಳಲ್ಲಿ ಕೆಲಸ ಮಾಡಬಲ್ಲ ನಾಯಕರು ಎಲ್ಲೆಡೆ ಇದ್ದಾರೆ ಅಂಥವರನ್ನು ಗುರುತಿಸಿ ಅವರಿಗೆ ಬೆಂಬಲ ನೀಡಿ ಅವರಿಂದ ಕೆಲಸ ಮಾಡಿಸುವ ಸಾಧ್ಯತೆ ಇದೆ. ನಮ್ಮದು ಪ್ರಜಾತಂತ್ರ ರಾಜ್ಯವ್ಯವಸ್ಥೆ ಯಾಗಿರುವುದರಿಂದ ಮುಕ್ತವಾದ ಚರ್ಚೆಗೆ ಮತ್ತು ಅಹಿಂಸಾತ್ಮಕ ಕಾರ್ಯ ಚಟುವಟಿಕೆಗಳಿಗೆ ಪೂರ್ತ ಅವಕಾಶವಿದೆ. ದೇಶದಲ್ಲಿರುವ ಸ್ವಾತಂತ್ರ್ಯವನ್ನು ಇಂಥ ಒಳ್ಳೆಯ ಕೆಲಸಗಳಿಗೆ ಉಪಯೋಗಿಸಿ ಕೊಳ್ಳುವ ತಿಳುವಳಿಕೆಯನ್ನು ಜನತೆ ಹೊಂದಬೇಕು.

ಈಗ ನಮ್ಮ ದೇಶದಲ್ಲಿ ಪ್ರಧಾನವಾಗಿ ಎರಡೇ ಶಕ್ತಿಗಳು ಕೆಲಸಮಾಡು ತ್ತಿವೆ. ಒಂದು, ರಾಜ್ಯಶಕ್ತಿ; ಇನ್ನೊಂದು ದಂಡ ಶಕ್ತಿ. ಈಗ ಮೂರನೆಯ ಶಕ್ತಿಯೊಂದು ಆವಿರ್ಭಾವಗೊಳ್ಳ ಬೇಕಿದೆ. ಅದುವೇ ಜನಶಕ್ತಿ ಅಥವಾ ಲೋಕಶಕ್ತಿ. ಎಲ್ಲಿಯವರೆಗೆ ರಾಜ್ಯಶಕ್ತಿಯಿಂದ ಭಿನ್ನವಾದ ಲೋಕಶಕ್ತಿಯ ನಿರ್ಮಾಣವಾಗುವುದಿಲ್ಲವೋ ಅಲ್ಲಿಯವರೆಗೆ ಕೋಮುಗಲಭೆಗಳ ನಿರ್ನಾಮ ಮತ್ತು ನಿಯಂತ್ರಣ ಸಾಧ್ಯವಿಲ್ಲ. ಕೋಮು ರಾಜಕಾರಣ ಇಂದು ನಮ್ಮ ದೇಶದ ಮೊದಲ ಶತ್ರುವಾಗಿದೆ.

ಈ ಶತ್ರುವು ನಮ್ಮ ದೇಶದ ಜನಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ವ್ಯಾಪಿಸಿದ್ದಾನೆ. ಆದ್ದರಿಂದ ಸಮಾಜದ ಪ್ರತಿಯೊಂದು ವರ್ಗದ ಜನರೂ ವ್ಯಾಪಾರಸ್ಥರು, ವಕೀಲರು, ವೈದ್ಯರು, ಶಿಕ್ಷಕರು. ವಿಜ್ಞಾನಿಗಳು, ನೌಕರರು ಆದಿಯಾಗಿ ಎಲ್ಲರೂ ಕೋಮುವಾದದ ವಿರುದ್ಧ ಹೋರಾಡಬೇಕು. ಎಲ್ಲ ಕೋಮುಗಳ ಮಠಾಧೀಶರು ಇಡೀ ಸಮಾಜದಲ್ಲಿ ಶಾಂತಿ ಸ್ಥಾಪನೆಯ ಜವಾ ಬ್ದಾರಿಯನ್ನು ಹೊತ್ತುಕೊಳ್ಳಬೇಕು.

ಕೋಮುಗಲಭೆಗಳಿಗೆ ಹತ್ತಾರು ಕಾರಣಗಳಿವೆ. ಆ ಕಾರಣಗಳನ್ನು ಗುರುತಿಸಿಕೊಂಡು ಅವುಗಳ ನಿವಾರಣೆಗಾಗಿ ಎಲ್ಲರೂ ಒಂದು ಗೂಡಿ ಸಂಘಟನಾತ್ಮಕ ಪ್ರಯತ್ನ ಮಾಡಬೇಕು. ಕೋಮು ಸೌಹಾರ್ದತೆಯನ್ನು ಸ್ಥಾಪಿಸುವಲ್ಲಿ ಮತ್ತು ಅದನ್ನು ಕಾಪಾಡಿಕೊಂಡು ಬರುವಲ್ಲಿ ಪ್ರಚಾರ ಮಾಧ್ಯಮಗಳ ಪಾತ್ರ ಹಿರಿದಾಗಿದೆ ಮತ್ತು ಜವಾಬ್ದಾರಿಯುತವಾಗಿದೆ. ಮಾಧ್ಯಮಗಳು ತಮ್ಮ ರೀತಿ–ನೀತಿಗಳನ್ನು ಬದಲಾಯಿಸಿಕೊಳ್ಳಬೇಕು. ಹೀಗೆ ಕೋಮುಗಲಭೆಗಳ ನಿಯಂತ್ರಣದಲ್ಲಿ ಜನತೆ ಸಕ್ರಿಯವಾಗಿ ಭಾಗವಹಿಸಬೇಕೇ ವಿನಹ ನಿರಾಸಕ್ತಿಯ ಭಾವನೆಯನ್ನು ತೊರೆಯಬೇಕು. ★

–ಸುರೇಂದ್ರ ಕೌಲಗಿ

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಪಾಶ್ಚಾತ್ಯರ ಏಕಸಂಸ್ಕೃತಿ ಮತ್ತು ಭಾರತೀಯ ವೈವಿಧ್ಯ

ಇಂಗ್ಲೀಷ್ ಮೂಲ : ಡೇವಿಡ್ ಫ್ರಾಲೀ
ಕನ್ನಡಕ್ಕೆ : - ಜಿ. ಅನಿಲ್‌ಕುಮಾರ್

ಪಾಶ್ಚಾತ್ಯ ನಾಗರಿಕತೆಯು ತಾನು ವೈವಿಧ್ಯಕ್ಕೆ ಬೆಂಬಲ ಕೊಡುತ್ತೇನೆ ಎಂದು ಎಷ್ಟೆಷ್ಟು ಸಾರಿಕೊಂಡರೂ ವಿಶ್ವವ್ಯಾಪೀ ಏಕಸಂಸ್ಕೃತಿಯನ್ನೇ ಉತ್ತೇಜಿಸುತ್ತಿದೆ: ಎಲ್ಲೆಡೆ ಅದೇ ಮೌಲ್ಯಗಳು, ಅದೇ ಬಗೆಯ ವ್ಯವಸ್ಥೆಗಳು ಮತ್ತು ಎಲ್ಲರಿಗೂ ಒಂದೇ ಬಗೆಯ ಅಭಿಪ್ರಾಯವಿರಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಹೀಗೆ. ಇದನ್ನು 'ಜಾಗತೀಕರಣ' ಎಂದು ಕರೆಯಲಾಗುತ್ತಿದೆ. ಪಶ್ಚಿಮದ ವ್ಯಾಪಾರೀ ಸಂಸ್ಕೃತಿ ತನಗಾಗಿ ಮಾರುಕಟ್ಟೆಗಳನ್ನು ಮತ್ತು ಸರಕುಗಳನ್ನು ಅರಸುತ್ತಾ ಹೋಗಿ, ಎಲ್ಲ ನಿಜಸಂಸ್ಕೃತಿಗಳನ್ನೂ ನಾಶ ಮಾಡುತ್ತದೆ. ಅದರ ದೃಷ್ಟಿಯಲ್ಲಿ ಗುಣಕ್ಕಿಂತ ಗಾತ್ರಬಾಹುಳ್ಯಕ್ಕೇ ಪ್ರಾಶಸ್ತ್ಯ. ಎಲ್ಲ ಪರಿಶುದ್ಧ ಅಥವಾ ಆಧ್ಯಾತ್ಮಿಕ ಸಂಸ್ಕೃತಿಗಳನ್ನೂ ನುಂಗಿಹಾಕುವ ಹಣದ ಸಂಸ್ಕೃತಿಯನ್ನು ಅದು ಸೃಷ್ಟಿಸುತ್ತದೆ, ಅದರಲ್ಲಿ ಏನನ್ನು ಬೇಕಾದರೂ ಕೊಳ್ಳಬಹುದು, ಏನನ್ನು ಬೇಕಾದರೂ ಮಾರಬಹುದು, ಯಾವುದನ್ನಾದರೂ ಪಡೆಯಬಹುದು, ಯಾವುದನ್ನಾದರೂ ವ್ಯಾಪಾರಕ್ಕೆ ತೊಡಗಿಸಬಹುದು.

ಉದಾಹರಣೆಗೆ ನಾವು ಅಮೇರಿಕದ ಯಾವುದೇ ಬೃಹತ್ ಮಳಿಗೆಗೆ ಹೋದರೂ, ನಾವು ಆ ದೇಶದ ಯಾವ ರಾಜ್ಯದಲ್ಲಿದ್ದೇವೆ ಎಂದು ಹೇಳುವುದೇ ಕಷ್ಟವಾಗುತ್ತದೆ. ಫ್ಲಾರಿಡಾ, ಕ್ಯಾಲಿಫ್ರೋರ್ನಿಯಾ, ನ್ಯೂಯಾರ್ಕ್ ಅಥವಾ ಮಧ್ಯಪಶ್ಚಿಮ – ಹೀಗೆ ಎಲ್ಲ ಪ್ರಾಂತಗಳ ಬೃಹತ್ ಮಳಿಗೆಗಳೂ ಒಂದೇ ಬಗೆಯ ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಂಡಿರುತ್ತವೆ, ಒಂದೇ ಬಗೆಯ ಉತ್ಪನ್ನಗಳನ್ನೇ ಮಾರುತ್ತವೆ. ಅವುಗಳ ಎಲ್ಲ ರಸ್ತೆಗಳೂ ಒಂದೇ ತರಹ ಕಾಣುತ್ತವೆ. ಮನೆಗಳು, ಅಪಾರ್ಟ್‌ಮೆಂಟುಗಳು ಮತ್ತು ಕಚೇರಿ ಕಟ್ಟಡಗಳು ಎಲ್ಲವೂ ಒಂದರ ಹಾಗೇ ಇನ್ನೊಂದಿರುತ್ತವೆ. ಜನಗಳೆಲ್ಲ ಒಂದು ನಿರ್ದಿಷ್ಟ ಮಾದರಿಗೆ ಸೇರುವ ಆಹಾರಗಳನ್ನೇ ಬಳಸುತ್ತಾರೆ. ಎಲ್ಲರ ಕೆಲಸ ಮಾಡುವ, ನಿದ್ರಿಸುವ ಮತ್ತು ವಿಶ್ರಾಂತಿ ತೆಗೆದುಕೊಳ್ಳುವ - ಅಭ್ಯಾಸಗಳೂ ಒಂದೇ ರೀತಿಯಲ್ಲಿವೆ. ಬಹುತೇಕ ಎಲ್ಲವೂ ಭಾರೀ ಪ್ರಮಾಣದಲ್ಲಿ ತಯಾರಾಗುವಂತಹವೇ, ಒಂದೇ ಆರ್ಥಿಕ ಶಕ್ತಿಯನ್ನು ಅನುಸರಿಸುವಂತಹವೇ.

ಅಮೆರಿಕದಲ್ಲಿ ಆರಂಭವಾದ ಈ ಒಂದೇ ಮಾದರಿಗಳ ವ್ಯಾಪಾರಗಳು, ಅದು ಕೋಕಾಕೋಲಾ ಇರಬಹುದು, ಮೆಕ್‌ಡಾನಲ್ಡ್ಸ್ ಆಗಿರಬಹುದು, ಬ್ಲೂ ಜೀನ್ಸ್ ಅಥವಾ ಬಾರ್ಬಿ ಬೊಂಬೆಗಳು ಹೀಗೆ ಏನೇ ಆಗಿರಬಹುದು. ಒಟ್ಟಿ

ನಲ್ಲಿ ಅದೇ ಈಗ ವಿಶ್ವಾದ್ಯಂತ ಹರಡುತ್ತಿರುವುದು. ಟೋಕಿಯೋ, ಶಾಂಘೈ, ಮುಂಬಯಿ ಅಥವಾ ಲಂಡನ್ - ಜಗತ್ತಿನ ಯಾವುದೇ ಮುಖ್ಯ ನಗರವನ್ನು ತೆಗೆದುಕೊಂಡರೂ ಎಲ್ಲ ಕಡೆಯೂ ಅವೇ ಬಹುರಾಷ್ಟ್ರೀಯ ಕಂಪೆನಿಗಳು ಕಾಣ ಸಿಗುತ್ತವೆ. ಅಮೆರಿಕದ ವ್ಯಾಪಾರೀ ಸಂಕೀರ್ಣಗಳಲ್ಲಿ ಚೀನೀ ರೆಸ್ಟೋರೆಂಟುಗಳು ಕಂಡು ಬಂದರೂ, ಅವೂ ಪಾಶ್ಚಾತ್ಯ ವ್ಯಾಪಾರವು ಪ್ರವರ್ತಿಸಿರುವಂತಹ ವಾಣಿಜ್ಯ ಮಾರ್ಗವನ್ನೇ ಅನುಸರಿಸುತ್ತವೆ, ಅದರಂತೆಯೆ ನಡೆಯುತ್ತವೆ. ನಿಜವಾದ ಜಾಗತೀಕರಣವನ್ನು ಅವು ಪ್ರತಿನಿಧಿಸುವುದಿಲ್ಲ. ಅವು ಪಶ್ಚಿಮದ ವಾಣಿಜ್ಯ ಸಂಸ್ಕೃತಿಯನ್ನು ತನ್ನ ಜೊತೆಗೆ ಆಯ್ದುಕೊಂಡ ವಿದೇಶೀ ವ್ಯಾಪಾರಗಳಂತಾಗಿವೆ.

ವಿಶ್ವದ ಮಾಧ್ಯಮಗಳಂತೂ ಇನ್ನೂ ಹೆಚ್ಚಿನ ಏಕಸಂಸ್ಕೃತಿಯವು. ವಿಶ್ವ ವ್ಯಾಪಿ ಸುದ್ದಿವಿತರಣ ಸಂಸ್ಥೆಗಳು ತಮ್ಮ ಒಂದೇ ಬಗೆಯ ಸಾಂಸ್ಕೃತಿಕ ಪೂರ್ವಗ್ರಹದೊಡನೆ ಒಂದೇ ಬಗೆಯ ಸುದ್ದಿಗಳನ್ನೇ ಕೊಡುತ್ತವೆ. ಅವುಗಳನ್ನು ಪಾಶ್ಚಾತ್ಯ ಮಾದರಿಯೊಡನೆ ಹೊಂದಿಸಿಡಲಾಗಿದೆ. ಅವುಗಳು ಪಾಶ್ಚಾತ್ಯ ದೃಷ್ಟಿಕೋನವನ್ನೇ ಪುರಸ್ಕರಿಸುತ್ತವೆ. ಪಶ್ಚಿಮದ ಮಾದರಿಯ 'ಮುಕ್ತ ಮಾರುಕಟ್ಟೆ ವ್ಯಾಪಾರ,' ಸಾಮಾಜಿಕ ಸಮಾನತೆ, ಪ್ರಜಾತಂತ್ರ ಮತ್ತು ಸಮೃದ್ಧಿ– ಇವುಗಳಿಗೇ ಉತ್ತೇಜನ ಕೊಡುತ್ತವೆ. ಪ್ರಪಂಚದಾದ್ಯಂತ ಇರುವ ಎಲ್ಲ ಜನರೂ ಹಾಲಿವುಡ್ ಸಿನೆಮಾಗಳನ್ನೇ ನೋಡುತ್ತಾರೆ; ಅಮೆರಿಕ ಮತ್ತು ಯುರೋಪಿನ ಪಾಪ್ ಸಂಗೀತ ಕೇಳುತ್ತಾರೆ; ಅಮೆರಿಕದ ಅಥ್ಲೆಟ್‌ಗಳನ್ನು ಅತಿಯಾಗಿ ಸ್ತುತಿಸುತ್ತಾರೆ.

ಹಾಗೆಯೇ, ಬೇರೆ ಪ್ರಾಚೀನ ಮತ್ತು ಸತ್ವಪೂರ್ಣ ನಾಗರಿಕತೆ ಇದ್ದರೂ ವಿಶ್ವದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಪ್ರಮುಖವಾಗಿ ಬೋಧಿಸಲ್ಪಡುವುದು ಪಾಶ್ಚಾತ್ಯ ನಾಗರಿಕತೆಯನ್ನೇ. ಭಾರತದಂತಹ ದೇಶದಲ್ಲಿ ಸಂಸ್ಕೃತದ ಶ್ರೇಷ್ಠಕವಿ ಕಾಳಿದಾಸನಿಗಿಂತ ಎಲ್ಲರೂ ಹೆಚ್ಚಾಗಿ ತಿಳಿದು ಕೊಂಡಿರುವುದು ಮತ್ತು ಉದ್ಧರಿಸುವುದು ಷೇಕ್‌ಸ್ಪಿಯರನನ್ನು. ಜಪಾನೀಯರು ಅತ್ಯುತ್ಸಾಹದಿಂದ ಪಾಶ್ಚಾತ್ಯ ಸಂಸ್ಕೃತಿ, ಸಂಗೀತ ಮತ್ತು ಮನೋರಂಜನೆಯನ್ನು ಸ್ವೀಕರಿಸುತ್ತಿ ರುವುದರಿಂದ ಪಶ್ಚಿಮ ದೇಶಗಳು ಅವರನ್ನು ಗೌರವಿಸುತ್ತವೆ. ಆದರೆ ತಮ್ಮ ನೆಲದ ಸಂಸ್ಕೃತಿಗೆ ಅಂಟಿಕೊಳ್ಳಲು ಮತ್ತು ಉಪಭೋಗವಾದದೊಡನೆ ವಿಲೀನ ವಾಗುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುವವರನ್ನು ಅದು ಮುಚ್ಚಿದ ಮನಸ್ಸಿನವರು, ಅಥವಾ ಕೋಮುವಾದಿಗಳು ಎಂದು ಪರಿಗಣಿಸುತ್ತವೆ.

ಏಕ ಸಂಸ್ಕೃತಿಯ ಅಪಾಯ :

ಈ ಉಪಭೋಗವಾದೀ ಏಕಸಂಸ್ಕೃತಿ ಒಂದು ದೊಡ್ಡ ಸಾಂಸ್ಕೃತಿಕ ಮಟ್ಟ ಸಗಾರ. ಅದು ಹೋದೆಡೆಯಲ್ಲೆಲ್ಲ ಅಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ನಾಶ

ಮಾಡುತ್ತದೆ, ಇಲ್ಲವೆ ತನ್ನ ಜೊತೆಗೆ ಸೇರಿಸಿಕೊಂಡುಬಿಡುತ್ತದೆ. ಮೂಲ ಸಂಪ್ರದಾಯಗಳನ್ನೂ ಪದ್ಧತಿಗಳನ್ನೂ ನಾಶಮಾಡಿ, ಅವುಗಳ ಜಾಗದಲ್ಲಿ ಪಾಶ್ಚಾತ್ಯ ವ್ಯಾಪಾರೀ, ರಾಜನೈತಿಕ, ಮತೀಯ ಅಥವಾ ಬೌದ್ಧಿಕ ಮಾದರಿಗಳನ್ನು ಸ್ಥಾಪಿಸುವುದರ ಮೂಲಕ ಅದು ಸ್ಥಳೀಯ ಸಂಸ್ಕೃತಿಗೆ ಮಾರಕವಾಗುತ್ತದೆ ಅಥವಾ ಆ ಸಂಸ್ಕೃತಿಯನ್ನೂ ಅದರ ಸ್ಥಳೀಯ ಕಲೆಗಳನ್ನೂ ತನ್ನ ಗ್ಲೋಕ್ ಮಾರ್ಕೆಟಿಂಗ್ ಉದ್ದೇಶಗಳಿಗೆ ಹೊಂದುವ ಥಳುಕಿನ ಸರಕುಗಳಾಗಿ ಪರಿವರ್ತಿಸಿ ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತದೆ. ಉದಾಹರಣೆಗೆ, ಅಮೇರಿಕದಲ್ಲಿ ಅಲ್ಲಿನ ಮೂಲ ಸಂಸ್ಕೃತಿಯನ್ನು ಭಾರೀ ಲಾಭ ತರುವ ಒಂದು ದೊಡ್ಡವ್ಯಾಪಾರವನ್ನಾಗಿ ಪರಿವರ್ತಿಸಿಡಲಾಗಿದೆ. ಆದರೂ ಅಲ್ಲಿನ ಮೂಲನಿವಾಸಿಗಳಿಗೆ ಹಣ ತಲುಪುವುದೇ ಇಲ್ಲ! ಇತರ ಸಂಸ್ಕೃತಿಗಳನ್ನು ಮತ್ತು ನಾಗರಿಕತೆಗಳನ್ನು ಇಡಿಯಾಗಿ ಬುಡಮೇಲು ಮಾಡುವ ಅಥವಾ ನಾಶಮಾಡುವ ಮೂಲಕ, ಏಕಸಂಸ್ಕೃತಿಯು "ಸಾಂಸ್ಕೃತಿಕ ಹರಣ"ವನ್ನು ಮಾಡುತ್ತದೆ. ಆಧುನಿಕ ವಾಣಿಜ್ಯ ಸಂಸ್ಕೃತಿಯು ತನ್ನ ವಿಸ್ತರಣಾ ಗುರಿಗಳಿಗೆ ಅಡ್ಡಬರದಿರುವವರೆಗೆ ತನ್ನೊಳಗೆ ವೈವಿಧ್ಯಕ್ಕೊಂದು ಅವಕಾಶವನ್ನು ಮಾಡಿ ಕೊಟ್ಟರೂ, ಮೂಲತಃ ಏಕಸ್ವಾಮಿತ್ವ ಮತ್ತು ಏಕಪ್ರಾಬಲ್ಯಗಳೇ ಅದರ ಲಕ್ಷಣಗಳು.

ಈ ಸಾಮಾಜಿಕ ಏಕಸಂಸ್ಕೃತಿ ಪ್ರವರ್ತನೆಯನ್ನು ನಾವು ಮರಗಿಡ-ಬೆಳೆಗಳ ಏಕಸಂಸ್ಕೃತಿಯೊಡನೆ ಹೋಲಿಸಬಹುದು. ಒಂದೇ ಬೆಳೆಯನ್ನು ಅದೇ ಮಣ್ಣಿನಲ್ಲಿ ಪುನಃ ಪುನಃ ಬೆಳೆಯುತ್ತಿದ್ದರೆ ಅದು ಏಕಬೇಸಾಯವಾಗುತ್ತದೆ. ಪರಿಣಾಮವಾಗಿ ಮಣ್ಣು ಸಾರಗೆಡುತ್ತದೆ. ಅರಣ್ಯನಾಶದಿಂದ ಸಸ್ಯವೈವಿಧ್ಯವು ನಾಶವಾದಾಗ ಉಳಿದ ಕೆಲವೇ ತಳಿಗಳಿಂದ ನಿಸರ್ಗದಲ್ಲಿ ಏಕಬಿತ್ತನೆ ದಾರಿಯಾಗುತ್ತದೆ. ವ್ಯವಸಾಯದಲ್ಲಿ ಮತ್ತು ಅರಣ್ಯೀಕರಣದಲ್ಲಿ ಏಕಬಿತ್ತನೆ ಕಾಲಿಟ್ಟರೆ ಅದು ಸಸ್ಯ ಮತ್ತು ಪಶುವೈವಿಧ್ಯದ ನಾಶಕ್ಕೆ ಕಾರಣವಾಗುತ್ತದೆ. ಹಾಗೆಯೇ ಮಾನವನಾಗರಿಕತೆಯೊಳಗೆ ಏಕಸಂಸ್ಕೃತಿಯು ಕಾಲಿಟ್ಟಾಗ ಅದು ಸಾಂಸ್ಕೃತಿಕ ಮತ್ತು ವ್ಯಕ್ತಿಗತ ವೈವಿಧ್ಯಕ್ಕೆ ನಷ್ಟವನ್ನುಂಟು ಮಾಡುತ್ತದೆ. ಇಂದು ಸಾಂಪ್ರದಾಯಿಕ ಸಂಸ್ಕೃತಿಗಳು ಸತ್ವಹೀನವಾಗುತ್ತಿರುವುದಕ್ಕೆ ಮತ್ತು ತ್ವರಿತವಾಗಿ ಮಾಯವಾಗುತ್ತಿರುವುದಕ್ಕೆ ನಾವು ಮೂಕಸಾಕ್ಷಿಗಳಾಗಿದ್ದೇವೆ. ಸಂಸ್ಕೃತಿಯ ಮುಖಮುದ್ರೆಗಳಂತಿರುವ ಭಾಷೆಗಳು ಇಂದು ವೇಗವಾಗಿ ಸಾಯುತ್ತಿವೆ. ಏಕಸಂಸ್ಕೃತಿಗೆ ಸಾಧಾರಣೀಕರಣ ಮತ್ತು ಏಕರೂಪತೆಗಳೇ ನಿಯಮಗಳು. 'ಫ್ರಾಂಚೈಸ್' ವ್ಯವಸ್ಥೆ ಈಗ ಎಲ್ಲ ಬಗೆಯ ವ್ಯಾಪಾರಗಳ ಮೂಲಮಂತ್ರ. ಇದರಿಂದ ಸ್ಥಳೀಯ ಮತ್ತು ಗೃಹಮಳಿಗೆಗಳು ಮಾಯವಾಗುತ್ತಿವೆ. ಕೌಟುಂಬಿಕ ಜಮೀನು ದೊಡ್ಡ ದೊಡ್ಡ ಎಣ್ಣೆ ಕಂಪನಿಗಳ ಪಾಲಾಗಿ, ಜಾಗತಿಕ 'ಅಗ್ರಿ-

ಬಿಸಿನೆಸ್'ಗೆ ದಾರಿಮಾಡಿಕೊಟ್ಟಿದೆ. (ಕ್ಯಾಲಿಫೋರ್ನಿಯಾದಲ್ಲಿ ವಿಶಾಲ ಹರವಿನ ಕೃಷಿಭೂಮಿಗೆ 'ಎಕ್ಸಾನ್' ಒಡೆತನವಿರುವ ಹಾಗೆ)

ನಾವು ಈ ಏಕಸಂಸ್ಕೃತಿ ಮತ್ತು ಬಿತ್ತಿದೊಡನೆ ಮೂಲಬೀಜಗಳನ್ನೇ ಬರಡಾಗಿಸುವ ಮಾರಣಾಂತಕ ಬೀಜಗಳ ನಡುವೆ ಸಾಮ್ಯವನ್ನು ಗುರುತಿಸಬಹುದು. ಆ ಬೀಜಗಳ ನೈಜ ಉದ್ದೇಶ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದಲ್ಲ, ಬದಲಾಗಿ ರೈತರನ್ನೆಲ್ಲ ತಮ್ಮ ಮುಂದಿನ ಬೆಳೆಗಳಿಗಾಗಿ ಬೀಜದ ಬ್ಯಾಂಕುಗಳ ಮೇಲೆ ಅವಲಂಬಿತರನ್ನಾಗಿಸುವ, ತನ್ಮೂಲಕ ಅವರನ್ನು ಜಾಗತಿಕ 'ಅಗ್ರಿಬಿಸಿನೆಸ್'ನ ನಿಯಂತ್ರಣಕ್ಕೆ ಒಳಪಡಿಸುವ ಉದ್ದೇಶ್ಯ ಅದರದು. ಈ ಏಕಸಂಸ್ಕೃತಿಯಾದರೋ ವಿಶ್ವದ ಎಲ್ಲ ಚರ್ಚಾ ನಿಯಮಗಳನ್ನೂ ಅಭಿಪ್ರಾಯ ಮಂಡನೆಗಳನ್ನೂ ನಿಯಂತ್ರಿಸಲು ಯತ್ನಿಸುತ್ತದೆ. ಈಗ ಜನರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾನ್ಯತೆಯನ್ನು ಗಳಿಸಿಕೊಳ್ಳುವುದು ಏಕಸಂಸ್ಕೃತಿ ಮತ್ತದರ ಮಾಧ್ಯಮಗಳು ಅವರನ್ನು ಗುರುತಿಸಿದಾಗಲೇ! ಇತರ ಸಾಂಸ್ಕೃತಿಕ ಸಂಪ್ರದಾಯಗಳ ಪ್ರತಿನಿಧಿಗಳು ಲೆಕ್ಕಕ್ಕೂ ಇರುವುದಿಲ್ಲ. ಇದರ ಪರಿಣಾಮವಾಗಿ, ಜನರು ತಮ್ಮ ಸ್ಥಳೀಯ ಸಾಂಸ್ಕೃತಿಕ ವಿಚಾರಗಳ ಶಿಕ್ಷಣಕ್ಕಾಗಿಯೂ ಏಕಸಂಸ್ಕೃತಿ ಸಂಸ್ಥೆಗಳೆಡೆಗೆ ಹೋಗುತ್ತಾರೆ. ಭಾರತೀಯ ಸಂದರ್ಭದಲ್ಲಿ ಹೇಳುವುದಾದರೆ, ಭಾರತೀಯ ಪಂಡಿತರು ತಮ್ಮ ಜ್ಞಾನಾಧಿಕಾರ ಪತ್ರವನ್ನು ಪಡೆದುಕೊಳ್ಳಲು ತಮ್ಮ ಗುಡಿ – ಆಶ್ರಮಗಳನ್ನು ಅರಸುವುದಿಲ್ಲ, ಬದಲಾಗಿ ಹೈಡೆಲ್‌ಬರ್ಗ್, ಆಕ್ಸ್‌ಫರ್ಡ್ ಅಥವಾ ಹಾರ್ವರ್ಡ್‌ಗಳಂತಹ ಪಾಶ್ಚಾತ್ಯ ಸಂಸ್ಥೆಗಳ ಅಥವಾ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಂತಹ ಪಾಶ್ಚಾತ್ಯೀಕರಣಗೊಂಡ ಸಂಸ್ಥೆಗಳ ಬಳಿಸಾರುತ್ತಾರೆ. ಅಂತಹ ಪಂಡಿತರು ತಮ್ಮ ಸ್ವಂತ ಸಾಂಸ್ಕೃತಿಕ ಸಂಪ್ರದಾಯಗಳಿಗೇ ವಿರೋಧಿಗಳಾಗಿ, ತಮ್ಮ ದೇಶೀಯ ವಿಚಾರಕ್ರಮಗಳನ್ನು ಕಿತ್ತೆಸೆದು, ಅಲ್ಲಿ ಪಶ್ಚಿಮದ ಸಾಂಸ್ಕೃತಿಕ ಬೀಜಗಳನ್ನು ನೆಟ್ಟು, ನ್ಯಾಯವಾಗಿ ತಾವು ಪ್ರತಿನಿಧಿಸಬೇಕಾಗಿದ್ದ ತಮ್ಮ ಸ್ವಂತ ಸ್ವತಂತ್ರ, ಸಂಪ್ರದಾಯಗಳಿಗೇ ಮಂಗಳ ಹಾಡುತ್ತಾರೆ!

ಜೀವವೈವಿಧ್ಯದ ನಾಶದ ಹಾಗೆಯೇ ಸಾಂಸ್ಕೃತಿಕ ವೈವಿಧ್ಯದ ನಾಶವೂ ಜೀವಂತ ರೀತಿನೀತಿಗಳಿಗೆ ವಿಧ್ವಂಸನಕಾರಿಯಾಗುತ್ತದೆ. ಜೀವವೈವಿಧ್ಯದ ನಾಶವು ನಿಸರ್ಗಕ್ಕೆ ಎಂತಹ ಹಾನಿ ಮಾಡುತ್ತದೋ ಅಂತಹ ಹಾನಿಯನ್ನೇ ಸಾಂಸ್ಕೃತಿಕ ವೈವಿಧ್ಯದ ನಷ್ಟವು ಮನುಕುಲಕ್ಕೆ ಮಾಡುತ್ತದೆ. ನಾವು ನಮ್ಮ ಹೊರಜಗತ್ತಿನ ಕಾಡುಗಳನ್ನು ಮತ್ತು ಪಶುಸಂಪತ್ತನ್ನು ನಾಶಮಾಡುತ್ತಿರುವ ಹಾಗೆಯೇ ನಮ್ಮ ಒಳಗಿನ ಕಲೆ ಮತ್ತು ಆಧ್ಯಾತ್ಮಿಕತೆಯನ್ನೂ ನಾಶಮಾಡಿಕೊಳ್ಳುತ್ತಿದ್ದೇವೆ. ನಮ್ಮ ಮನಸ್ಸುಗಳು ನಮ್ಮ ನದಿಗಳಷ್ಟೇ ಕಲುಷಿತವಾಗಿವೆ.

ಏಕಸಂಸ್ಕೃತಿ ಮತ್ತು ಜೀವನದ ಗುಣಮಟ್ಟ :

'ಜೀವನಮಟ್ಟ'ಗಳನ್ನು ಏರಿಸುವುದರ ಮೂಲಕ ಬದುಕನ್ನು ಉತ್ತಮ ಪಡಿಸುವೆನೆಂದು ಹೇಳಿಕೊಳ್ಳುತ್ತಿದೆ. ಏಕಸಂಸ್ಕೃತಿ ಜಗತ್ತಿನ ಎಲ್ಲ ಜನರೂ ತಮ್ಮ ತಾಯಿ-ತಂದೆಯರವಕ್ಕಿಂತ ಹೆಚ್ಚಿಗೆ ಆದಾಯವನ್ನು ಗಳಿಸಬಲ್ಲವರಾಗಿದ್ದಾರೆ. ಈ ಕಾಗದದ ಹಣದಿಂದ ಅವರು ಕಂಪ್ಯೂಟರ್, ಟೆಲಿವಿಷನ್, ಸ್ಟೀರಿಯೋಗಳು ಅಥವಾ ಇತರ ಯಾವುದೇ ಇತ್ತೀಚಿನ ತಂತ್ರಜ್ಞಾನದ ಪದಾರ್ಥಗಳನ್ನು ಕೊಳ್ಳಬಹುದು. ಅವರು ರೆಸ್ಟೋರೆಂಟುಗಳಿಗೆ ಹೋಗಬಹುದು. ಚಲನಚಿತ್ರಗಳನ್ನು ನೋಡಬಹುದು. ಪ್ರವಾಸ ಹೋಗಬಹುದು, ಮತ್ತು ದುಬಾರಿ ಹೋಟೆಲ್‌ಗಳಲ್ಲಿ ತಂಗಬಹುದು. ಆದರೂ ಇಷ್ಟೊಂದು ವೃದ್ಧಿಸಿರುವ 'ಕಾಗದದ ಸಂಪತ್ತು'ವಂಚಕ ರೀತಿಯದು. ಅವರ ಮನೆಗಳು ದಾಖಲೆಗಳ ಪ್ರಕಾರ, ಕಾಗದದ ಹಣದಲ್ಲಿ, ಅವರ ತಂದೆ-ತಾಯಿಗಳದಕ್ಕಿಂತ ತುಂಬಾ ಬೆಲೆಬಾಳುವುದಾಗಿದ್ದರೂ, ಸಾಮಾನ್ಯವಾಗಿ ಚಿಕ್ಕದಾಗಿರುತ್ತವೆ ಮತ್ತು ಅವುಗಳನ್ನು ನಿಭಾಯಿಸುವುದು ಬಹಳ ದುಬಾರಿ. ವಾಸ್ತವವಾಗಿ, ಎಲ್ಲೆಡೆ ಮನೆಗಳ ಕೊರತೆಯಿದೆ. ಮನುಷ್ಯನ ವಾಸಸ್ಥಳದ ಸುತ್ತಲೂ ಕಾಣಸಿಗುತ್ತಿದ್ದ ಪ್ರಕೃತಿಯ ಸುಂದರ ದೃಶ್ಯಗಳಿಗೆ ಬದಲಾಗಿ ನಗರದ ಸಿಮೆಂಟು, ಗಾಜು ಮತ್ತು ಕಬ್ಬಿಣದ ನಿಸ್ತೇಜ ವಾತಾವರಣ ಬಂದು ನೆಲಸಿದೆ. ಅದರ ಪ್ರಕಾರ ಉದ್ಯಾನವೆಂದರೆ, ಮನೆಯ ಬಿಸಿಲುಮಚ್ಚಿನ ಮೇಲೆ ಬೀದಿಯನ್ನು ನೋಡುತ್ತಾ ಕುಳಿತ ಕುಂಡಗಳಲ್ಲಿರುವ ಗಿಡಗಳು!

ಪ್ರಪಂಚದಲ್ಲೆಲ್ಲಾ, ಗಾಳಿ ಮತ್ತು ನೀರಿನ ಗುಣಮಟ್ಟವನ್ನು ಹಾಳುಗೆಡವಲಾಗಿದೆ. ನಮ್ಮ ಹೆಚ್ಚಿನಾಂಶ ನೀರು ಕುಡಿಯಲು ಅಯೋಗ್ಯವಾಗಿದೆ. ನಮ್ಮ ಅನೇಕ ತೊರೆಗಳಲ್ಲಿ ಮೀನು ಸಹ ಬದುಕಲಾರದು. ಬೃಹದ್ ವ್ಯವಸಾಯ ಎಷ್ಟೇ ಮುಂದುವರಿದಿದ್ದರೂ ಆಹಾರದ ಗುಣಮಟ್ಟ ಮಾತ್ರ ಬಹಳ ಕಡಮೆ. ಹಿಂದಿನ ತಲೆಮಾರುಗಳ ಮನೆಯಲ್ಲಿ ಬೆಳೆದ ಅಥವಾ ತಾಜಾ ಆಗಿ ತಯಾರಿಸಿದ ಅಡುಗೆಯ ಸ್ಥಾನವನ್ನು ಈಗ ಫಾಸ್ಟ್ - ಫುಡ್ ಮತ್ತು ಅತಿ - ಮಸಾಲೆ ತುಂಬಿದ ಖಾದ್ಯಗಳ ರೆಸ್ಟೋರೆಂಟುಗಳು ತುಂಬಿವೆ. ಪಶ್ಚಿಮದಲ್ಲಿ ಸಾಮಾನ್ಯವಾಗಿ ಎಲ್ಲೆಂದರಲ್ಲಿ ಸುಲಭವಾಗಿ ಸಿಗುತ್ತಿದ್ದ ಉತ್ತಮ ಗುಣಮಟ್ಟದ ತಾಜಾ ಹಣ್ಣು ಮತ್ತು ತರಕಾರಿಗಳು ಇಂದು ಕೇವಲ ಕೆಲವೇ ವಿಶೇಷ ನೈಸರ್ಗಿಕ ಆಹಾರ ಅಂಗಡಿಗಳಲ್ಲಿ ವಿಶೇಷ ಬೆಲೆಗೆ ಅಪರೂಪಕ್ಕೆ ಸಿಗುವಂತಾಗಿದೆ.

ಏಕಸಂಸ್ಕೃತಿಯ ವ್ಯಕ್ತಿಗೆ ಸಿಗುವ ಬಿಡುವು ಹಿಂದಿನ ಲೆಮಾರುಗಳಿಗಿಂತ ಬಹಳ ಕಡಮೆ. ಈಗ ನಾವು ವಾರವಿಡೀ ದುಡಿಯುವುದರಲ್ಲಿ ಮತ್ತು ಬಿಡು

ಏದ್ದಾಗ ಶಾಪಿಂಗ್ ಮತ್ತು ಇತರ ಮನೆಗೆಲಸಗಳಲ್ಲಿ ನಿರತರಾಗಿರುತ್ತೇವೆ. ಸಂಗೀತ, ನಾಟಕ, ಉತ್ಸವಗಳು ಮತ್ತು ನೃತ್ಯಗಳಂತಹ ಸ್ಥಳೀಯ ಸಾಂಸ್ಕೃತಿಕ ಚಟುವಟಿಕೆಗಳು ಬಹಳ ಕಡಮೆಯಾಗಿವೆ, ಮತ್ತು ಈಗ ಅವುಗಳಲ್ಲೂ ವ್ಯಾಪಾರೀ ದೃಷ್ಟಿ ಹೊಕ್ಕಿದೆ. ಜನರು ಅವುಗಳಲ್ಲಿ ಹಿಂದಿನಂತೆ ಭಾಗವಹಿಸದೆ ಸುಮ್ಮನೆ ಕುಳಿತು ನೋಡುವ ತರಹದಲ್ಲಿ ಅವು ಮಾರ್ಪಟ್ಟಿವೆ. ಈ ಚಟುವಟಿಕೆಗಳಲ್ಲಿ ಹಿಂದೆ ಇರುತ್ತಿದ್ದ ದೈವೀಭಾವನೆ ಮರೆಯಾಗಿದೆ. ಆದ್ದರಿಂದ ಈ ಸಂಸ್ಕೃತಿಗೆ ನಿಜವಾದ ಬಲಿಯೆಂದರೆ ವ್ಯಕ್ತಿಯೇ. ಅವರಿಗೆ ಅಥವಾ ಅವಳಿಗೆ ತನ್ನೊಡನೆಯು, ಪ್ರಕೃತಿಯೊಡನೆಯು, ಜಗತ್ತಿನೊಡನೆಯು, ಸಮುದಾಯದೊಡನೆಯು ನೇರ ಸಂಪರ್ಕ ತಪ್ಪಿಹೋಗಿದೆ.

ಏಕಸಂಸ್ಕೃತಿ ಮತ್ತು ಏಕದೇವವಾದ :

ಪಾಶ್ಚಾತ್ಯ ನಾಗರಿಕತೆಯ ಇಂಥ ಏಕಸಂಸ್ಕೃತಿಯ ಮೂಲಗಳನ್ನು ಅದರ ಏಕದೇವವಾದಲ್ಲಿ ಕಾಣಬಹುದು -- ಅದರಲ್ಲೂ ವಿಚಾರಗಳಲ್ಲಿ ಮತ್ತು ಅನುಭವ ಗಳಲ್ಲಿ ಇಷ್ಟೇ ಹಳೆಯದಾಗಿರುವ, ಶ್ರೀಮಂತವಾಗಿರುವ ಇತರ ಎಲ್ಲ ಆಧ್ಯಾತ್ಮಿಕ ಮಾರ್ಗಗಳನ್ನು ಕಡೆಗಣಿಸಿ ಎಲ್ಲ ಜನರಿಗೂ ಒಂದು ನಿರ್ದಿಷ್ಟ ಮಾದರಿಯ ಒಬ್ಬನೇ ದೇವರ ಮೇಲಿನ ನಂಬಿಕೆಯನ್ನೇ ಹೇರುವ ಮಿಷನರಿ ಮಾದರಿಯ ಏಕದೇವವಾದದಲ್ಲಿ ಕಾಣಬಹುದು. ಈ ಏಕದೇವರಾದರೋ ತುಂಬಾ ಗುರು ತರವಾದ ಬಹುಮಾನಗಳನ್ನು ಮತ್ತು ಶಿಕ್ಷೆಗಳನ್ನು ಕೊಡುವ ಗಡಸು ವ್ಯವಸ್ಥೆ ಯಿಟ್ಟುಕೊಂಡಿರುವ (ಅದಕ್ಕಾಗಿ ಇಡೀ ಜಗತ್ತಿಗೇ ಒಬ್ಬ ರಕ್ಷಕ, ಒಂದು ಬೈಬಲ್ ಮತ್ತು ಚರ್ಚುಗಳ ಅಗತ್ಯ ಬೀಳುತ್ತದೆ) ಅವನು ದಮನಕಾರಿಯಂತೆ ಕಾಣುತ್ತಾನೆ. ದೇವರನ್ನು ಕುರಿತ ಈ ರೀತಿಯ ಪರಿಕಲ್ಪನೆ ಪ್ರವಾದಿಗಳ ಮೂಲ ಪರಿಕಲ್ಪನೆಯೋ ಅಥವಾ ಅನಂತರದ ಮಾರ್ಗಾಂತರವೋ ಎನ್ನುವುದು ಹಾಗಿರಲಿ, ಒಟ್ಟಿನಲ್ಲಿ ಈ ಪರಿಕಲ್ಪನೆಯೇ ಈಗ ಪಾಶ್ಚಾತ್ಯ ಮತೀಯ ಚಿಂತನೆಗಳನ್ನು ಮತ್ತು (ಮತೀಯ ಮತ್ತು ಸೆಕ್ಯುಲರ್ ಎರಡೂ ತರಹದ) ಪಾಶ್ಚಾತ್ಯ ಸಂಸ್ಕೃತಿಯನ್ನು ಆಳುತ್ತಿರುವುದು.

ಮೊದಲಿನ ಕ್ರೈಸ್ತಮತದ (ಕ್ರಿಶ್ಚಿಯಾನಿಟಿ) ಅಡಿಯಲ್ಲಿ, ಏಕದೇವವಾದವು ರೋಮನ್ ಸಾಮ್ರಾಜ್ಯವಾದದ ಮತ್ತು ಅಂತಹ ಆಡಳಿತದೊಡನೆ ನಿಷ್ಠೆಯ ಹೊಂದಾಣಿಕೆ ಮಾಡಿಕೊಂಡು (ಅದೂ ಸಹ ರಾಜಕೀಯ ಏಕಸಂಸ್ಕೃತಿ) ತನ್ನ ಮತೀಯ ಜಿಗುಟು ಕಾಠಿಣ್ಯವನ್ನು ಒಂದು ಮಿಲಿಟರಿ ಆಯುಧವನ್ನಾಗಿಸಿತ್ತು. ವಸಾಹತೀಕರಣದ ಯುಗದಲ್ಲಿ, ಪಾಶ್ಚಾತ್ಯ ಏಕಸಂಸ್ಕೃತಿಯು ಚರ್ಚಿನ ಮತ್ತು ಸಾಮ್ರಾಜ್ಯದ ಅಂಗವಾಗಿ ಎಲ್ಲರನ್ನೂ ಪಾಶ್ಚಾತ್ಯ ಮತ್ತು ಕ್ರೈಸ್ತರನ್ನಾಗಿಸಲು

ವಿಶ್ವವನ್ನೇ ಜಯಿಸುವ ಒಂದು ಸಾಧನವಾಯಿತು. ಧಾರ್ಮಿಕ ವೈವಿಧ್ಯ ಮತ್ತು ವ್ಯಕ್ತಿಗತವಾದ ಆಧ್ಯಾತ್ಮಿಕ ಅನುಭವಗಳನ್ನು ನಾಶಮಾಡುವ ಮತ್ತೀಯ ಏಕಸಂಸ್ಕೃತಿಯಾಗಿರುವ ವಿಸ್ತರಣವಾದೀ ಏಕದೇವವಾದದಿಂದ ಹೊರಟ ಏಕ ಸಂಸ್ಕೃತಿಯು ಕ್ರಮೇಣ ಇತರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಬೌದ್ಧಿಕ ರೂಪಗಳನ್ನು ಪಡೆದುಕೊಂಡಿತು.

ಪಾಶ್ಚಾತ್ಯ ಏಕಸಂಸ್ಕೃತಿಯು ಒಂದು ಸರ್ವಾಧಿಕಾರೀ ಸಂಪ್ರದಾಯ. ವ್ಯಾಟಿಕನಿನಂತಹ ಏಕದೇವವಾದೀ ವ್ಯವಸ್ಥೆಗಳು, ಇಂದಿಗೂ ಸಹ, ಜನಸಮೂಹ ಗಳಿಗೆ ಮೇಲಿಂದ ಆಜ್ಞೆಗಳನ್ನು ಹೊರಡಿಸುವ ಸರ್ವಾಧಿಕಾರೀ ಅಧಿಕಾರಿಕ ಶ್ರೇಣಿ ಗಳೇ ಆಗಿವೆ. ಮತಗ್ರಂಥದ ನಿಶ್ಚಿತಾಭಿಪ್ರಾಯವನ್ನು (ಡಾಗ್ಮಾ), ಪ್ರವಾದಿ ಅಥವಾ ರಕ್ಷಕನನ್ನು, ಮತ್ತು ಆ ಒಬ್ಬನೇ ದೇವರನ್ನು ಯಾರೂ ಪ್ರಶ್ನಿಸು ವಂತಿಲ್ಲ. ತಥಾಕಥಿತ ಇಸ್ಲಾಮೀ 'ಗಣರಾಜ್ಯ'ಗಳಲ್ಲಿ ದೈವನಿಂದಾವಿರೋಧಿ ಕಾನೂನುಗಳೇ ಜಾರಿಯಲ್ಲಿವೆ. ಅದರನ್ವಯ, ದೈವನಿಂದೆಯು ಮರಣದಂಡನೆಗೆ ತಕ್ಕದಾದ ಅಪರಾಧ, ಅಥವಾ ಅದಲ್ಲದಿದ್ದಲ್ಲಿ ಕೊನೆಯ ಪಕ್ಷ ಶಿಕ್ಷಾರ್ಹ ಅಪ ಅಪರಾಧ ಎನಿಸಿಕೊಂಡಿದೆ. ಮತತ್ಯಾಗವಿರೋಧಿ ಕಾನೂನುಗಳೂ ಇವೆ. ಅವುಗಳನ್ವಯ ಮುಸ್ಲಿಮರು ಇತರ ಧರ್ಮಕ್ಕೆ ಮತಾಂತರ ಹೊಂದುವಂತಿಲ್ಲ (ಆದರೆ ಇತರ ಧರ್ಮಗಳವರು ಇಸ್ಲಾಮಿಗೆ ಮತಾಂತರಗೊಳ್ಳಲು ಅನುಮತಿ ಇದೆ). ಮಧ್ಯಕಾಲದ ಕ್ರೈಸ್ತಮತದಲ್ಲಿ ಇಂತಹುದೇ ನಿಯಮಗಳಿದ್ದವು. ವಿಜ್ಞಾನವನ್ನು ಮತ್ತು ಮುಕ್ತ ಚಿಂತನೆಗಳನ್ನು ದಮನಮಾಡಲು ಆ ನಿಯಮ ಗಳನ್ನು ಬಳಸಿಕೊಳ್ಳಲಾಗುತ್ತಿತ್ತು.

ಆದರಿಂದ, ಕ್ರೈಸ್ತರು ತಮ್ಮ ಏಕದೇವವಾದಕ್ಕೆ ಹೊಸ ಎಳೆಯನ್ನು ಸೇರಿಸಿದ್ದಾರೆ. ಕ್ರೈಸ್ತಮತವನ್ನು, ಅದಲ್ಲದಿದ್ದರೆ ಕೊನೆಯಪಕ್ಷ ಏಕದೇವ ವಾದವನ್ನು ಅವರು ಏಕತೆ, ಸಮಾನತೆ ಮತ್ತು ಪ್ರಜಾತಂತ್ರದೊಡನೆ ಸಮೀ ಕರಿಸುತ್ತಾರೆ. ಒಂದೇ ಮಾನವತೆ ಮತ್ತು ಒಬ್ಬನೇ ದೇವರು. ಆದರೆ ಕ್ರೈಸ್ತ ಮತದ, ಕ್ರೈಸ್ತ ನಂಬಿಕೆಗಳ ಪ್ರತ್ಯೇಕತಾವಾದೀ ಮತ್ತು ಏಕಸ್ವಾಮ್ಯವಾದೀ ಸ್ವಭಾವವನ್ನು ಉಳಿಸಿಕೊಂಡೇ ಇವನ್ನೆಲ್ಲಾ ಅವರು ಮಾಡುತ್ತಿರುವುದು. ಉದಾಹರಣೆಗೆ, ಈಗಿನ ಪೋಪ್, ಇವೇ ವಾದಸರಣಿಗಳನ್ನೂ ಪ್ರಚಾರತಂತ್ರ ಗಳನ್ನೂ ಬಳಸಿಕೊಂಡು ವಿಶ್ವದಲ್ಲಿನ ಕ್ಯಾಥೊಲಿಕ್ ಮತಾಂತರ ಯತ್ನಗಳನ್ನು ಸಮರ್ಥಿಸಿಕೊಂಡಿದ್ದಾರಷ್ಟೆ. ಅವರು ನಮ್ಮನ್ನು ನಂಬಿಸಲು ಯತ್ನಿಸುತ್ತಿರು ವುದು ಏನೆಂದರೆ – ಅಧಿಕಾರವಾದೀ ಚರ್ಚು ಮತ್ತು ಅದರ ಹಳೆಯದಾದ ನಿಶ್ಚಿತಾಭಿಪ್ರಾಯವನ್ನು ಪ್ರವರ್ಧಿಸುವುದು ವಾಸ್ತವವಾಗಿ ಉದಾರವಾದವೇ; ಆದರಿಂದಾಗಿ ಎಲ್ಲೆಡೆ, ಅದರಲ್ಲೂ ಕ್ರೈಸ್ತೇತರ ದೇಶಗಳಲ್ಲಿ ಚರ್ಚಿನ ಮಧ್ಯ

ಪ್ರವೇಶವಾಗಿ, ಪ್ರಜಾತಂತ್ರವಿರೋಧಿ ಸರ್ಕಾರಗಳಿಂದ ಮತ್ತು ಸಾಮಾಜಿಕ ಅಸಮಾನತೆಗಳಿಂದ ಜನರನ್ನು ರಕ್ಷಿಸಿ ಅವರಿಗೆ ರಾಜಕೀಯ 'ಸ್ವಾತಂತ್ರ್ಯ'ವನ್ನು ಗಳಿಸಿಕೊಡುವುದಾಗುತ್ತದೆ! ಅವರು ಅನೇಕ ದೇಶಗಳಲ್ಲಿ ಮುಕ್ತಸ್ವಾತಂತ್ರ್ಯ ಮತ್ತು ಪ್ರಜಾತಂತ್ರದ ಕೊರತೆಯಿರುವುದರ ಬಗ್ಗೆ ಮಾತನಾಡುತ್ತಾರೆ. ಆದರೆ ಆ ಅಂಶಗಳನ್ನು ಮೊದಲು ತನ್ನ ಚರ್ಚಿಗೇ ಅಳವಡಿಸಬೇಕು ಎಂದು ಅವರಿಗೆ ಅನಿಸುವುದೇ ಇಲ್ಲ!

ಏಕದೇವವಾದ ಮತ್ತು ಕ್ರೈಸ್ತಮತ – ಇವನ್ನು ಈಗ ಪಶ್ಚಿಮದಲ್ಲಿ ಮಾನವಹಕ್ಕುಗಳು ಮತ್ತು ಪ್ರಜಾತಂತ್ರದೊಡನೆ ಸಮೀಕರಿಸಲಾಗುತ್ತಿದೆ. ಆದರೆ ಚರ್ಚು ಮತ್ತು ಸರ್ವಾಧಿಕಾರಿಗಳ, ಮಿಲಿಟರಿ ಆಡಳಿತಗಾರರ ನಡುವಿನ ಮೈತ್ರಿ ಬಹುಕಾಲದಿಂದ ಮುಂದುವರಿದಿರುವ ಮಧ್ಯ ಮತ್ತು ದಕ್ಷಿಣ ಅಮೆರಿಕ ದೇಶಗಳತ್ತ ನಾವು ನೋಡಬೇಕು. ಅಲ್ಲೆಲ್ಲ ಒಡವ - ಬಲ್ಲಿದರ ನಡುವೆಯೂ ಐರೋಪ್ಯ ರಕ್ತದವರ ಮತ್ತು ಅಮೆರಿಕ ಮೂಲನಿವಾಸಿಗಳ ನಡುವೆಯೂ ದೊಡ್ಡ ಅಸಮಾನತೆ ಹಿಂದಿನಂತೆಯೇ ಮುಂದುವರಿದಿವೆ. ಮುಸೊಲಿನಿಯೂ ಸೇರಿದಂತೆ ಯೂರೋಪಿನ ಮತ್ತು ಅಮೆರಿಕದ ಫ್ಯಾಸಿಸ್ಟ್ ಸರ್ವಾಧಿಕಾರಿಗಳೆಲ್ಲಿ ಒಳ್ಳೆಯ ಕ್ಯಾಥೊಲಿಕ್ ಶ್ರದ್ಧಾಳುಗಳೇ ಆಗಿದ್ದರೂ; ಚರ್ಚು ಅವರನ್ನೆಂದಿಗೂ ಗಂಭೀರವಾಗಿ ವಿರೋಧಿಸಲೇ ಇಲ್ಲ–ಎಂಬುದನ್ನು ನಾವು ನೆನಪಿನಲ್ಲಿರಿಸಿಕೊಳ್ಳಲೇ ಬೇಕು. ಹಾಗಿದ್ದರೂ, ಇಂದು ಇತಿಹಾಸದ ಈ ಎಲ್ಲ ವಾಸ್ತವತಥ್ಯಗಳನ್ನು ಕಡೆಗಣಿಸಿ. ಫ್ಯಾಸಿಸ್ಟಗಳು ಅಥವಾ ಕೋಮುವಾದಿಗಳು ಎಂದು ಜರಿಯಲಾಗುತ್ತಿರುವುದು ಮಿಷನರಿಗಳನ್ನು ವಿರೋಧಿಸುವವರನ್ನೇ ಹೊರತು, ಮಿಷನರಿಗಳನ್ನಲ್ಲ!

ಪಾಶ್ಚಾತ್ಯ ಏಕದೇವವಾದವು ಅಧಿಕಾರವಾದಿಯಾಗಿದ್ದರೂ, ಪ್ರಜಾತಂತ್ರ ವಿರೋಧಿಯಾಗಿದ್ದರೂ, ಏಕಸಂಸ್ಕೃತಿಗೆ ಆದರೊಡನೆ ಅಂತಹ ಗಂಭೀರ ತಕರಾರುಗಳಿಲ್ಲ. ಈ ಮತಗಳಲ್ಲಿ ಒಬ್ಬ ಮನುಷ್ಯನಿಗೆ ಒಂದು ವೋಟು ಎಂಬ ವಿಚಾರಗಳೇನೂ ಇಲ್ಲ. ಅಲ್ಲಿರುವುದೆಲ್ಲ ಮೇಲಿನಿಂದ ಹೊರಡಿಸುವ ನಿರ್ದೇಶ (fiat) ಗಳು ಮತ್ತು ಫತ್ವಾಗಳು. ಏಕದೇವವಾದೀ ಚರ್ಚಿನೊಡನೆ ಏಕಸಂಸ್ಕೃತಿಯು ಆರ್ಥಿಕ ಅಥವಾ ರಾಜಕೀಯ ಪ್ರಭಾವವಿರುವ ಯಾವುದೇ ದೇಶ ಅಥವಾ ನಿಗಮದೊಡನೆ ವರ್ತಿಸುವಂತೆಯೇ ವರ್ತಿಸುತ್ತದೆ. ಅವುಗಳಿಗೆ ಕೊಡುವಷ್ಟೇ ಗೌರವನ್ನು ಇದಕ್ಕೂ ಕೊಡುತ್ತದೆ. ಇದಕ್ಕೆ ಕಾರಣ ಪಶ್ಚಿಮದ ಏಕದೇವವಾದವು ವ್ಯಾಪಾರೀ ಸಂಸ್ಥೆಯ ಮಾದರಿಯನ್ನು ಅಳವಡಿಸಿಕೊಂಡಿರುವುದು ಮತ್ತು ತನ್ನ ಸಂಖ್ಯಾಬಲವನ್ನು ರಾಜಕೀಯ ಪ್ರಭಾವ ಮತ್ತು ರಾಜಕೀಯ ಕೃಪೆಯನ್ನು ಗಳಿಸಿಕೊಳ್ಳಲು ಬಳಸಿಕೊಂಡಿರುವುದು. ತನ್ನ

ಮತಾಂತರ ಕಾರ್ಯಕ್ಕಾಗಿ ಅದು ಮಾಧ್ಯಮಗಳು ಮತ್ತು ಇಂಟರ್‌ನೆಟ್–ಇವುಗಳನ್ನೆಲ್ಲಾ ಉಪಯೋಗಿಸಿಕೊಂಡು ಒಂದು ದೊಡ್ಡ ಬಹುರಾಷ್ಟ್ರೀಯ ಮತೀಯ ವ್ಯಾಪಾರವನ್ನೇ ಸೃಷ್ಟಿಸಿದೆ. ಮತೀಯ ಸಂದೇಶಗಳನ್ನು ವ್ಯವಸ್ಥಿತವಾದ ಜಾಹೀರಾತು ಪ್ರಚಾರದಂತೆ ಪ್ರಸರಿಸುತ್ತದೆ. ವಿಶ್ವದ ಮಾಧ್ಯಮಗಳು ತಾವು ಹೇಗೆ ಫಾಸ್ಟ್ ಫುಡ್ ಉದ್ಯಮದ ದಾಳಿಯನ್ನು ಎದುರಿಸುವುದಿಲ್ಲವೋ ಹಾಗೆಯೇ ಇಂತಹ ಮತೀಯ ದಾಳಿಯನ್ನೂ ವಿರೋಧಿಸುವುದಿಲ್ಲ.

೧೯ನೇ ಶತಮಾನದ ಯೂರೋಪಿನಲ್ಲಿ ಚರ್ಚು ಮತ್ತು ಬೈಬಲನ್ನು ಪ್ರಶ್ನಿಸುವ ಮುಕ್ತ ಚಿಂತಕರು ಅನೇಕ ಮಂದಿ ಇದ್ದರೂ ಅಂದಿನ ವಸಾಹತು ಆಡಳಿತಗಾರರು (ಉದಾಹರಣೆಗೆ, ಭಾರತದಲ್ಲಿನ ಬ್ರಿಟಿಷರು) ಮಿಷನರಿಗಳು ತಮಗೆ ಬಹಳ ಅನುಕೂಲಕರವಾಗಿರುವುದನ್ನು ಅರಿತಿದ್ದರು. ಹಾಗೆಯೇ, ಪಶ್ಚಿಮದಲ್ಲಿ ಜನರು ಅನುಸರಿಸಿದ್ದುದಕ್ಕಿಂತ ಹೆಚ್ಚು ಸಂಪ್ರದಾಯವಾದೀ ಸ್ವರೂಪದ ಕ್ರೈಸ್ತಮತವನ್ನು ಈಗಿನ ಮಿಷನರಿಗಳು ಪ್ರತಿನಿಧಿಸುತ್ತಿದ್ದರೂ, ಆಧುನಿಕ ಏಕಸಂಸ್ಕೃತಿಯು ಅವರನ್ನು ತನ್ನ ಸಹಾಯಕ್ಕೆ ಒದಗಿಬರುವ ಸಲಕರಣೆಯ ರೀತಿಯಲ್ಲಿ ಇಟ್ಟುಕೊಂಡಿದ್ದರು. ಇಂತಹ ಹಿಂದುಳಿದ ಮತೀಯ ನಂಬಿಕೆಗಳು, ಬಡವರ ಮತ್ತು ಅಶಿಕ್ಷಿತರ ಬಳಿಸಾರುವುದರಿಂದಾಗಿ ದಕ್ಷಿಣ ಅಮೆರಿಕದಲ್ಲಿರುವಂತಹ ಅನೇಕ ನಿಷ್ಠಾವಂತ ಕ್ರೈಸ್ತರಾಷ್ಟ್ರಗಳು ಜಗತ್ತಿನ ಅತ್ಯಂತ ಹಿಂದುಳಿದ ರಾಷ್ಟ್ರಗಳ ಗುಂಪಿಗೆ ಸೇರಿವೆ. ಅಂದರೆ, ಬಡ ಸಂಸ್ಕೃತಿಗಳು ಪಾಶ್ಚಾತ್ಯೀಕರಣಕ್ಕೆ ಮೊದಲ ಮೆಟ್ಟಿಲನ್ನು ಕ್ರೈಸ್ತಮತ ಒದಗಿಸುತ್ತದೆ: ಅದರಲ್ಲೂ ಆಳವಾದ ಧಾರ್ಮಿಕ ಬೇರುಗಳಿರುವ ಭಾರತದಂತಹ ದೇಶಗಳಿಗೆ.

ಏಕಸಂಸ್ಕೃತಿ ಮತ್ತು ಪ್ರಜಾತಂತ್ರ :

ಏಕಸಂಸ್ಕೃತಿಯು ಪ್ರಜಾತಂತ್ರದೊಡನೆ ಚೆನ್ನಾಗಿ ಹೊಂದಿಕೊಂಡು ಬಿಟ್ಟಿದೆ. ಇದು ಮೇಲ್ನೋಟಕ್ಕೆ ಬಹಳ ಆಶ್ಚರ್ಯಕರವಾಗಿ ತೋರುತ್ತದೆ: ಏಕೆಂದರೆ, ಪ್ರತಿವ್ಯಕ್ತಿಗೂ ಸಮಾಜದೊಳಗೆ ಮುಕ್ತವಾದ ಮತ್ತು ಸಮಾನವಾದ ಸ್ಥಾನವನ್ನು ಕಲ್ಪಿಸಿಕೊಟ್ಟು, ವೈವಿಧ್ಯದ ಅಂತಿಮ ಸ್ಥಾನವನ್ನು ಕಲ್ಪಿಸಿಕೊಟ್ಟು, ವೈವಿಧ್ಯದ ಅಂತಿಮ ಸ್ವರೂಪವೇ ಆಗಿರುವಂತೆ ಪ್ರಜಾತಂತ್ರ ಕಾಣಿಸುತ್ತಿದೆ. ಪ್ರಜಾತಂತ್ರವೇನೋ ಪ್ರತಿ ವ್ಯಕ್ತಿಗೂ, ಬಡವ, ದುರ್ಬಲ ಅಥವಾ ಹಿರಿಯ ಎಂಬ ಭೇದವಿಲ್ಲದೆ ಒಂದೇ ಬಗೆಯ ವೋಟಿನ ಅಧಿಕಾರವನ್ನೂ ನೀಡಿದೆ. ಆದರೂ ಈಗಿನ ಪ್ರಜಾತಂತ್ರಗಳು ವೈವಿಧ್ಯದ ಹೊರರೂಪವನ್ನು ಮಾತ್ರ ಹೊಂದಿವೆ. ಇನ್ನೂ ಆಳವಾಗಿ ನೋಡಿದಾಗ, ಸಂಪೂರ್ಣವಾಗಿ ಸುಶಿಕ್ಷಿತವಾದ ಪ್ರಜಾತಂತ್ರವು ಮಾತ್ರ ವೈವಿಧ್ಯಮಯವಾಗಿರಬಲ್ಲದು

ಎನಿಸುತ್ತದೆ. ಅಶಿಕ್ಷಿತವಾದ ಪ್ರಜಾತಂತ್ರವು ತನ್ನದೇ ಆದ ಮಾದರಿಯ ನಿರಂಕುಶವಾದವನ್ನು ಅಥವಾ ದೊಂಬಿ ರಾಜ್ಯವನ್ನು ಹುಟ್ಟುಹಾಕುತ್ತದೆ. ಜನಸಮೂಹವನ್ನು ಹಣ, ಮಾಧ್ಯಮ ಅಥವಾ ವೋಟ್ ಬ್ಯಾಂಕುಗಳ ಮೂಲಕ ಸುಲಭವಾಗಿ ನಿಭಾಯಿಸಬಹುದು. ಆಧುನಿಕ ಪ್ರಜಾತಂತ್ರದಲ್ಲಿ ಒಬ್ಬ ರಾಜಕಾರಣಿಗೆ ಚುನಾವಣೆಯಲ್ಲಿ ಗೆದ್ದು ಬರುವುದು ಎಂದರೆ, ವೈವಿಧ್ಯವನ್ನು ಪ್ರೋತ್ಸಾಹಿಸುವ ವಿಚಾರವಲ್ಲ, ಆದರೆ ಘೋಷಣೆಗಳ ಮತ್ತು ಎಂದೂ ಈಡೇರಿಸದ ಭರವಸೆಗಳ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ನಿಭಾಯಿಸುವ ವಿಚಾರ ಅಷ್ಟೆ. ಆಕರ್ಷಣೀಯ ಸಿನೆಮಾ ತಾರೆಗಳು ಎಂತಹ ರಾಜತಾಂತ್ರಿಕರನ್ನೂ ಸುಲಭವಾಗಿ ಪರಾಭವಗೊಳಿಸಿಬಿಡುತ್ತಾರೆ. ಆಧುನಿಕ ರಾಜಕಾರಣಿಯು ಜಾಗೃತ, ಜ್ಞಾನಮಯ ಸಂಸ್ಕೃತಿಯೊಂದರ ಜನಗಳ ನಿಜವಾದ ಪ್ರತಿನಿಧಿಯಂತಿರದೆ ಜನಸಮೂಹವನ್ನು ಊಟ ಮತ್ತು ಸರ್ಕಸ್ಸುಗಳ ಮೂಲಕ ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದ ರೋಮ್ ಸಾಮ್ರಾಟನನ್ನು ಹೆಚ್ಚಾಗಿ ಹೋಲುತ್ತಾನೆ.

ವಿಶ್ವಾದ್ಯಂತ 'ಪ್ರಜಾತಂತ್ರ'ವನ್ನೇ ಉತ್ತೇಜಿಸುವುದು, ರಾಜಕೀಯ ವೈವಿಧ್ಯವನ್ನು ಕೊಲ್ಲುವ ಒಂದು ಒಳ್ಳೆಯ ಸಾಧನ. ಪಾಶ್ಚಾತ್ಯ ನಾಗರಿಕತೆಯನ್ನು ಪ್ರೋತ್ಸಾಹಿಸುವುದರ ಜೊತೆಗೆ ವ್ಯಾಪಾರ, ಮಾಧ್ಯಮ ಮತ್ತು ಏಕ ಸಂಸ್ಕೃತಿಗೆ ಅಧಿಕಾರ ನೀಡುವ ಪಾಶ್ಚಾತ್ಯ ಶೈಲಿಯ, ಸ್ವಭಾವದ ಪ್ರಜಾತಂತ್ರ ವ್ಯವಸ್ಥೆಯನ್ನು ಬಿಟ್ಟು ಇತರ ಯಾವುದೇ ರೀತಿಯ ರಾಜಕೀಯ ವ್ಯವಸ್ಥೆಗೂ ಇಂದಿನ ಜಗತ್ತಿನಲ್ಲಿ ಅವಕಾಶ ದೊರಕುತ್ತಿಲ್ಲ. ಏಕದೇವವಾದೀ ಮತಗಳು ಇತರ ಧಾರ್ಮಿಕ ಅಭಿಪ್ರಾಯಗಳನ್ನು ಹೇಗೆ ಸಹಿಸಲಾರವೋ ಹಾಗೆಯೇ ಪಾಶ್ಚಾತ್ಯ ಶೈಲಿಯ ಪ್ರಜಾತಂತ್ರವ್ಯವಸ್ಥೆಯ ಪರ ಹೋರಾಡುತ್ತಿರುವ ಗುಂಪುಗಳೂ ಸಹ ಬೇರೆ ಮಾದರಿಯ ಸರ್ಕಾರಗಳನ್ನೆಲ್ಲ, ಅವು ಅನೈತಿಕವೇನೋ ಎನ್ನುವಂತೆ, ವ್ಯವಸ್ಥಿತವಾಗಿ ಉರುಳಿಸಲು ಯತ್ನಿಸುತ್ತವೆ. ಹೇಗೆ ಏಕದೇವವಾದವು ತಾನೇ ಮಹಾನೈತಿಕ ಎಂದು ಹೇಳಿಕೊಂಡು ಇತರ ಎಲ್ಲಸ್ವರೂಪದ ಆಧ್ಯಾತ್ಮಿಕತೆಗಳನ್ನು ಪೈಶಾಚಿಕ ಎನ್ನುತ್ತದೊ, ಹಾಗೆಯೇ ಆಧುನಿಕ ಪ್ರಜಾತಂತ್ರವು ಸರ್ಕಾರೀ ವ್ಯವಸ್ಥೆಗಳಲ್ಲಿ ವೈವಿಧ್ಯಕ್ಕೆ ಅವಕಾಶ ಕೊಡದೆ ತಾನೊಂದೇ ಸ್ವೀಕಾರಾರ್ಹವಾದ ಮಾದರಿ ಎಂದು ಭಾವಿಸುತ್ತದೆ.

'ಮುಕ್ತ ವ್ಯಾಪಾರ'ದ ಹೆಸರಿನಲ್ಲಿ ಬಹುರಾಷ್ಟ್ರೀಯ ಕಾರ್ಪೊರೇಷನುಗಳು ಮತ್ತು ಅವುಗಳ ಫ್ರಾಂಚೈಸ್‌ಗಳು ಸೇರಿಕೊಂಡು ಹೇಗೆ ಸ್ಥಳೀಯ ವ್ಯಾಪಾರ ವ್ಯವಸ್ಥೆಗಳನ್ನು ಕೊನೆಗಾಣಿಸುತ್ತವೆಯೋ ಹಾಗೆಯೇ ಆಧುನಿಕ ಪ್ರಜಾತಂತ್ರಗಳು ಇತರ ಸ್ಥಳೀಯ ಆಡಳಿತ ಕೇಂದ್ರಗಳನ್ನು ಪಕ್ಕಕ್ಕೆ ತಳ್ಳುತ್ತವೆ. ಆಧುನಿಕ

ಪ್ರಜಾತಂತ್ರಗಳು ದೇಶವೇ ನಡೆಸುವ ಸರ್ಕಾರಗಳು. ಸಾಂಪ್ರದಾಯಿಕ ಸಮಾಜಗಳಲ್ಲಿರುವಂತಹ ಸ್ಥಳೀಯ ಆಡಳಿತಗಳಿಗೆ ಅಲ್ಲಿ ಸ್ಥಳಾವಕಾಶ ಬಹಳ ಕಡಿಮೆ. ಹಿಂದೆ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಹಳ್ಳಿ, ಜನಾಂಗ ಅಥವಾ ಸಮುದಾಯಕ್ಕೆ ತನ್ನ ಜೀವನ, ಆರೋಗ್ಯ ಮತ್ತು ಕೆಲಸಗಳ ಕುರಿತು ಸ್ವಯಂ-ನಿರ್ಧಾರದ ಹಕ್ಕುಗಳಿದ್ದವು. ಹಿಂದೆ ಚರ್ಚುಗಳಿದ್ದಂತೆ, ಈಗ ಸರ್ಕಾರಗಳು, ವ್ಯಕ್ತಿಗಳು ತಮ್ಮ ಜೀವನ ನಿರ್ವಹಣೆಗೆ ಸರ್ಕಾರಗಳನ್ನೇ ಅವಲಂಬಿಸಿಕೊಂಡಿರುವಂತೆ ಮಾಡುತ್ತವೆ. ಜನನಾಯಕರು ಜನರ ಮನೋಭಿಲಾಷೆಯಂತೆ ನಡೆದುಕೊಳ್ಳುತ್ತಿರುವವರ ರೀತಿಯಲ್ಲಿ ನಟಿಸುತ್ತಾ ಜನರನ್ನು ತಮ್ಮ ಅಧೀನದಲ್ಲಿರುವಂತೆ ಮತ್ತು ಅಜ್ಞಾನಿಗಳಾಗಿ ಇರುವಂತೆ ನೋಡಿಕೊಳ್ಳುತ್ತಿದ್ದಾರೆ.

ಪ್ರಜಾತಂತ್ರವು ಸಮಾಜವನ್ನು ಕಣಕಣಗಳನ್ನಾಗಿ ವಿಭಜಿಸಿಟ್ಟಿದೆ. ಸಾಮಾಜಿಕ ವರ್ಗಗಳನ್ನು ಅದು ಸಮಾಜದಿಂದ ಬೇರ್ಪಟ್ಟ ವ್ಯಕ್ತಿಯ ಮಟ್ಟಕ್ಕೆ ಇಳಿಸಿದೆ. ಸಾಮಾಜಿಕ ಬೆಂಬಲವಿಲ್ಲದ ಈ ಬಿಡಿ ವ್ಯಕ್ತಿಯನ್ನು ಪ್ರಭಾವಿತಗೊಳಿಸುವುದು ಈಗ ಸುಲಭವಾಗಿದೆ. ಹಾಗೆ ಬೆಂಬಲವಿಲ್ಲದ ವ್ಯಕ್ತಿ ದುರ್ಬಲನಾಗಿ ಹೊರಬೀಳುತ್ತಾನೆ. ಉದಾಹರಣೆಗೆ ಕುಟುಂಬದ ಮತ್ತು ಸಮುದಾಯದ ಬೆಂಬಲವೂ ಪೋಷಣೆಯೂ ಇಲ್ಲದ ವೃದ್ಧರು ಆರೋಗ್ಯರಕ್ಷಣೆ ಮತ್ತು ಇತರ ಅಗತ್ಯಗಳಿಗಾಗಿ ಸರ್ಕಾರದ ಆಶ್ರಿತರಾಗುತ್ತಾರೆ. ಅಂತಹ ಸರ್ಕಾರೀ ಸಂರಕ್ಷಣೆಯನ್ನು ಅನುಕಂಪ ಎಂದು ಭಾವಿಸಿದರೂ, ಅದು ನಿರ್ಭಾವುಕ, ಒಮ್ಮೊಮ್ಮೆ ಕ್ರೂರ ಮತ್ತು ಸಮಾಜದ ನೈಸರ್ಗಿಕ ವ್ಯವಸ್ಥೆಯನ್ನು ಕೊಂದದ್ದಾಗಿದೆ. ಆಧುನಿಕ ಪ್ರಜಾತಂತ್ರವು ಸೃಷ್ಟಿಸಿರುವ ಸಾಮಾಜಿಕ ಒಂಟಿತನದ ಫಲವಾಗಿ ಪಶ್ಚಿಮದಲ್ಲಿ ಎಲ್ಲ ವಯೋಮಾನದವರನ್ನೂ ಅದರಲ್ಲೂ ವಿಶೇಷವಾಗಿ ಮಧ್ಯವಯಸ್ಕರನ್ನು ಕಾಡುವ ಖಿನ್ನತೆಯ ಬೇನೆ ಹರಡುತ್ತಿದೆ. ಔಷಧ ಉದ್ಯಮ ಆಧುನಿಕ ಸಮಾಜದ ಅನುಕಂಪಪೂರ್ಣ ರಕ್ಷಕನಂತೆ ತೋರಿದರೂ, ವಾಸ್ತವವಾಗಿ ಅದು ಒಂದು ಇಡೀ ಸಂಸ್ಕೃತಿಯನ್ನು ತನ್ನೆಲ್ಲಾ ಹೆಚ್ಚುತ್ತಿರುವ ಶಾರೀರಿಕ ಮತ್ತು ಮಾನಸಿಕ ಸಮಸ್ಯೆಗಳ ಪರಿಹಾರಕ್ಕೆಂದು ಔಷಧಸೇವನೆಯ ಚಟದೆಡೆಗೆ ದೂಡುತ್ತಿದೆ. ವೃದ್ಧರ ಔಷಧಗಳಿಗಾಗಿ ಎಷ್ಟು ಹಣವನ್ನು ವಿನಿಯೋಗಿಸಬೇಕೆಂಬ ಚರ್ಚೆಯಲ್ಲಿ ಸರ್ಕಾರಗಳು ಮುಳುಗಿವೆ. ಆದರೆ ಏಕೆ ಒಂದು ಇಡಿ ತಲೆಮಾರೇ ಔಷಧಗಳನ್ನು ಅವಲಂಬಿಸುವಂತಾಗಿದೆ ಎಂದು ಅವು ಯೋಚಿಸುವುದೇ ಇಲ್ಲ.

ಏಕಸಂಸ್ಕೃತಿ ಮತ್ತು ಮುಕ್ತ ವ್ಯಾಪಾರ :

ಏಕಸಂಸ್ಕೃತಿಗೂ ಮುಕ್ತ ವ್ಯಾಪಾರಕ್ಕೂ ಮತ್ತು ಏಕಸಂಸ್ಕೃತಿಯ ಅರ್ಥ

ಶಾಸ್ತ್ರವೇ ಆಗಿರುವ ಜಾಗತಿಕ ಉಪಭೋಗವಾದಕ್ಕೂ ನಡುವೆ ಒಳ್ಳೆಯ ಬಾಂಧವ್ಯವಿದೆ. ಇತರ ಆರ್ಥಿಕ ಪದ್ಧತಿಗಳನ್ನು ಅದು ಸ್ವೀಕರಿಸುವುದಿಲ್ಲ. ಅವುಗಳನ್ನು ವ್ಯವಸ್ಥಿತವಾಗಿ ಮಟ್ಟಹಾಕಲು ನೋಡುತ್ತದೆ. ಏಕಸಂಸ್ಕೃತಿಯ ಆರ್ಥಿಕ ಶಕ್ತಿಯು ಆರ್ಥಿಕ ವೈವಿಧ್ಯವನ್ನು ಮುರಿದುಹಾಕಿ, ವಿಶ್ವಾದ್ಯಂತ ಒಂದೇ ರೀತಿಯ ಆರ್ಥಿಕ ಮಾನದಂಡ ಅಥವಾ ಒಂದೇ ಕರೆನ್ಸಿಯ ವ್ಯವಸ್ಥೆಯೆಡೆಗೆ ಸರಿಯುತ್ತಿದೆ. ಸಾರ್ವತ್ರಿಕ ವಿಶ್ವ ಆರ್ಥಿಕತೆಯು ದೇಶೀ ಅರ್ಥಶಾಸ್ತ್ರವನ್ನು ನಾಶಪಡಿಸುತ್ತಿದೆ. ಸ್ಥಳೀಯ ಆರ್ಥಿಕತೆಗಳ ಜಾಗದಲ್ಲಿ ಬಹುರಾಷ್ಟ್ರೀಯ ವ್ಯಾಪಾರಿ ಸಂಸ್ಥೆಗಳ ಆಳ್ವಿಕೆ ಬಂದು ನೆಲಸುತ್ತಿದೆ. ಜಾಗತಿಕ ಕಾರ್ಪೊರೇಟ್ ಪರಿಹಾರಗಳನ್ನು ಸ್ಥಳೀಯ ಮ್ಯಾನೇಜ್‌ಮೆಂಟ್ ಸಮಸ್ಯೆಗಳಿಗೆ ಅನ್ವಯಿಸಲು ಹೋಗಿ, ಅದರಿಂದ ಅನಾಹುತಕಾರೀ ಫಲಿತಾಂಶಗಳೂ ದೊರಕುವುದುಂಟು. ಉದಾಹರಣೆಗೆ, ಕಾರ್ಪೊರೇಟ್ ವ್ಯವಸಾಯ. ಈ ಕೃಷಿ ಕ್ಷೇತ್ರದ ಏಕಸಂಸ್ಕೃತಿ ತಾನು ಇಡೀ ಜಗತ್ತಿಗೇ ಅನ್ನವುಣಿಸಿ ಜಗತ್ತಿನ ಹಸಿವನ್ನೆಲ್ಲಾ ಕಳೆಯುವುದಾಗಿ ಜಾಹೀರು ಮಾಡಿಕೊಳ್ಳುತ್ತದೆ. ಆದರೆ ಅದು ನಿಜವಾಗಿ ಮಾಡುತ್ತಿರುವುದು ತನ್ನ ಹಸಿದ ಹೊಟ್ಟೆ ತುಂಬಿಸಿಕೊಳ್ಳುವ ಮತ್ತು ತನ್ನ ಆಹಾರ ಸಂಪನ್ಮೂಲಗಳ ಮೇಲೆ ತಾನೇ ನಿಯಂತ್ರಣವಿಟ್ಟುಕೊಳ್ಳುವ, ಮೂಲಭೂತ ಮಾನವ ಹಕ್ಕುಗಳನ್ನೇ ಮಟ್ಟಹಾಕುವ ಕೆಲಸವನ್ನು. ಜಾಗತಿಕ ಅಗ್ರಿಬಿಸಿನೆಸ್ ತನ್ನ ದೃಷ್ಟಿಯಲ್ಲಿಟ್ಟುಕೊಂಡಿರುವುದು – ಇಡೀ ಜಗತ್ತಿನ ಆಹಾರ ಮಾರುಕಟ್ಟೆಯ ಮೇಲೆ ತನ್ನ ನಿಯಂತ್ರಣ ಸ್ಥಾಪಿಸುವುದು; ತನ್ಮೂಲಕ ಎಲ್ಲ ದೇಶಗಳೂ ತನಗೆ ತಲೆಬಾಗುವಂತೆ ಮಾಡುವುದು; ಅವಕ್ಕೆ ತನ್ನ ಕೃಪೆಯಿಲ್ಲದೆ ತಿನ್ನುವುದೂ ಅಸಾಧ್ಯವಾಗುವಂತೆ ಮಾಡುವುದು. 'ಜೆನೆಟಿಕಲಿ ಇಂಜಿನಿಯರ್ಡ್ ಕ್ರಾಪ್ಸ್', ಸ್ಥಾನೀಯ ಸಸ್ಯಗಳನ್ನು ನಾಶಮಾಡುವ ಮಾರಣಾಂತಕ ಬೀಜಗಳು, ಮಣ್ಣನ್ನು ದುರ್ಬಲಗೊಳಿಸಿ ಅವಲಂಬನೆಯನ್ನು ಬೆಳೆಸುವ ಗೊಬ್ಬರಗಳು, ಪ್ರಾಕೃತಿಕ ಸಮೃದ್ಧಿಯ ಮೇಲೆ ಕಾರ್ಪೊರೇಟ್ ಸ್ವಾಮಿತ್ವವನ್ನು ಒದಗಿಸುವ ಸಸ್ಯಗಳ ಮೇಲಿನ ಪೇಟೆಂಟ್ – ಇವೆಲ್ಲ ಅದರ ಸಾಧನಗಳಲ್ಲಿ ಕೆಲವು. ತನ್ಮಧ್ಯೆ ಜಾಗತಿಕ ಆಹಾರ ವ್ಯಾಪಾರವನ್ನು ವಿರೋಧಿಸುವವರನ್ನೆಲ್ಲಾ ಹಿಂದುಳಿದವರೆಂದು ಭಾವಿಸುವುದು ಬೇರೆ. ಅಂದರೆ ಅಗ್ರಿಬಿಸಿನೆಸ್ ಇಲ್ಲದೆ ಬೇರೆ ಯಾರಿಗೂ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲಾಗುವುದಿಲ್ಲ!

ಏಕಸಂಸ್ಕೃತಿಯನ್ನು ಯಾರೇ ವಿರೋಧಿಸಲಿ, ಅವರ ಮೇಲೆ ಅದರ ಮತೀಯ, ರಾಜಕೀಯ, ಬೌದ್ಧಿಕ ಮತ್ತು ಆರ್ಥಿಕ ಶಕ್ತಿಗಳು ಒಟ್ಟಾಗಿ ದಾಳಿ ಮಾಡುತ್ತವೆ. ಏಕಸಂಸ್ಕೃತಿಯ ವಿಚಾರಗಳಾದ ಏಕದೇವವಾದ, ಪ್ರಜಾತಂತ್ರ, ಸಾಮಾಜಿಕ ಸಮಾನತೆ ಮತ್ತು ಮುಕ್ತ ವ್ಯಾಪಾರಗಳನ್ನು ಇತರ ಎಲ್ಲ

ಸಾಂಸ್ಕೃತಿಕ ದೃಷ್ಟಿಗಳನ್ನು ಕಬಳಿಸುವ ನೈತಿಕ ಕೈದೀವಿಗೆಯಂತೆ ಬಳಸಿಕೊಳ್ಳಲಾಗುತ್ತಿದೆ. ಅವನ್ನೇ 'ಸಾರ್ವತ್ರಿಕ' ವೆನ್ನಲಾಗುತ್ತಿದೆ. ಅಂದರೆ ಅವುಗಳನ್ನು ಯಾರೂ ಪ್ರಶ್ನಿಸುವಂತಿಲ್ಲ, ಅವುಗಳ ಹಿಂದೆ ನಿಜವಾಗಿ ಇರುವುದೇನು ಎಂದು ನೋಡುವಂತಿಲ್ಲ. ಇಂತಹ 'ಸಾರ್ವತ್ರಿಕತೆ' ಅಸಹಿಷ್ಣುತೆಯ ನೂತನ ಮುಖವಾಡ ಅಷ್ಟೆ. ಈ ಸಂಸ್ಕೃತಿಗೆ ಪ್ರತಿರೋಧ ತೋರಲು ಯತ್ನಿಸುವ ಶಕ್ತಿಗಳು ವಾಸ್ತವವಾಗಿ ವೈವಿಧ್ಯಮಯೀ ಪಥಗಳುಳ್ಳ ಅಥವಾ ಆಳವಾದ ಆಧ್ಯಾತ್ಮಿಕ ಜ್ಞಾನವನ್ನು ಅಥವಾ ಪ್ರಕೃತಿಯ ಮೇಲಣ ಪ್ರೀತಿಯನ್ನು ಬಿಂಬಿಸುವ ಶಕ್ತಿಗಳೇ ಆಗಿದ್ದರೂ, ಅವುಗಳನ್ನು 'ಕೋಮುವಾದಿ', 'ಪ್ರಜಾತಂತ್ರವಿರೋಧಿ' ಮತ್ತು 'ಪ್ರಗತಿವಿರೋಧಿ' ಎಂದು ಹಳಿಯಲಾಗುತ್ತಿದೆ.

ಉದಾಹರಣೆಗೆ ಮಿಷನರಿಗಳನ್ನು ಪ್ರತಿರೋಧಿಸುವ ಹಿಂದು ಪ್ರಯತ್ನಗಳನ್ನು ಮಾಧ್ಯಮಗಳು ಒಂದು ರೀತಿಯ ಮತೀಯ ಮೂಲಭೂತವಾದದಂತೆ ಚಿತ್ರಿಸುತ್ತವೆ. ಆದರೆ ಹಿಂದು ವೈವಿಧ್ಯದ ಮೇಲೆ ಕ್ರೈಸ್ತ ಮಿಷನರಿಗಳ ಆಕ್ರಮಣವನ್ನು ಮತ್ತು ಅಸಹಿಷ್ಣುತೆಯನ್ನು ಪ್ರಗತಿಪರ ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿಯಲ್ಲಿ, ಹಿಂದು ಆರ್ಥಿಕ ಚಳವಳಿಗಾರರು ಅಮೆರಿಕದ ಫಾಸ್ಟ್ – ಫುಡ್ ಉದ್ಯಮವನ್ನು ಎದುರಿಸುವಾಗ ಉಪಯೋಗಿಸಿದ "ಕಂಪ್ಯೂಟರ್ ಚಿಪ್ಸ್‌ಬರಲಿ, ಆಲೂಗೆಡ್ಡೆ ಚಿಪ್ಸ್ ಬೇಡ" ಎನ್ನುವ ಘೋಷಣೆಯನ್ನು ಅಮೆರಿಕದ ಮಾಧ್ಯಮಗಳು 'ಹಿಂದುಳಿಯುವಿಕೆ' ಮತ್ತು 'ಗೊಂದಲ' ಎಂದೇ ಭಾವಿಸಿದವು.

ವೈವಿಧ್ಯ – ಭಾರತೀಯ ಮಾದರಿ

ಅನೇಕ ನದಿಗಳ ಮತ್ತು ಅನೇಕ ಪರ್ವತಗಳ ಭಾರತದ ಭೂಪ್ರದೇಶದಂತೆಯೇ ಭಾರತೀಯ ಸಂಸ್ಕೃತಿಯೂ ಸಾಂಸ್ಕತಿಕ ವೈವಿಧ್ಯದಿಂದ ಕೂಡಿದೆ. ಅದು ಮೇಲಿನಂಥ ಏಕಸಂಸ್ಕೃತಿಯಲ್ಲ. ಜೀವನದ ಸಮಸ್ಯೆಗಳನ್ನು ಮಿಶ್ರ ದೃಷ್ಟಿಕೋನದಿಂದ ನೋಡುವ ವೈವಿಧ್ಯಮಯವಾದ ಮಾದರಿಯನ್ನು ಭಾರತೀಯ ನಾಗರಿಕತೆ ಆಧರಿಸಿದೆ. ಬೇರೆ ಬೇರೆ ವ್ಯಕ್ತಿಗಳಿಗೆ, ಭಿನ್ನ ಭಿನ್ನ ಸಮುದಾಯಗಳಿಗೆ ಬೇರೆ ಬೇರೆ ಅಭಿಪ್ರಾಯಗಳು ಸಮ್ಮತವಾಗುವುದನ್ನು ಅದು ಸ್ವೀಕರಿಸುತ್ತದೆ. ಚರ್ಚ್, ಸರ್ಕಾರ ಅಥವಾ ವ್ಯಾಪಾರೀ ಹಿತಾಸಕ್ತಿಗಳಂತಹ ದಮನಕಾರೀ ತಡೆಗಳಿಗೆ ಒಳಗಾಗದೆ ಅವುಗಳೆಲ್ಲ ಚೆನ್ನಾಗಿ ಅಭಿವದ್ಧಿಯಾಗುವುದನ್ನು ಪ್ರೋತ್ಸಾಹಿಸುತ್ತದೆ. ಪರಸ್ಪರರ ಅವಲಂಬನೆ, ಅಗತ್ಯ ಮತ್ತು ಹೊಂದಾಣಿಕೆಗಳ ಮೂಲಕ ಅದರ ಏಕತ್ವದ ಪರಿಕಲ್ಪನೆ ಉದಯಿಸುತ್ತದೆ. ಅನೇಕ ಋಷಿಗಳು, ಮಹಾತ್ಮರು, ಯೋಗಿಗಳು, ಅನೇಕ ತರಹದ ಬೋಧನೆಗಳು, ವೈ

ವಿಧ್ಯದ ದೇವದೇವತೆಗಳು ಮತ್ತು ಏಕ ಮತ್ತು ಅನೇಕ ಎರಡನ್ನೂ ಮಾನ್ಯ ಮಾಡಿರುವ ಪದ್ಧತಿಗಳು – ಎಲ್ಲವನ್ನೂ ಒಳಗೊಂಡ ಭಾರತೀಯ ಧರ್ಮಗಳಲ್ಲಿ ಇವನ್ನೆಲ್ಲಾ ನೋಡುತ್ತೇವೆ.

ಇನ್ನೊಂದು ಕಡೆ, ಕಳೆದ ಶತಮಾನಗಳಲ್ಲಿ ಅಭಿವೃದ್ಧಿಯಾಗಿರುವ ಹಾಗೆ, ಪಾಶ್ಚಾತ್ಯನಾಗರಿಕತೆ ಪೂರ್ತಿ ಏಕರೂಪಿಯಾದದ್ದು. ಎಲ್ಲರ ಮೇಲೂ ಒಂದೇ ಬಗೆಯ ಅಭಿಪ್ರಾಯವನ್ನು ಅದು ಹೇರುತ್ತದೆ. ಏಕರೂಪತೆಯಿಂದ ಅದರ ಏಕತ್ವದ ಪರಿಕಲ್ಪನೆ ಉದಯಿಸುತ್ತದೆ. ಒಬ್ಬನೇ ದೇವರು, ಒಂದೇ ಗ್ರಂಥ, ಒಬ್ಬನೇ ರಕ್ಷಕ, ಒಬ್ಬನೇ ಪ್ರವಾದಿ ಅಥವಾ ಒಂದೇ ಚರ್ಚು ಸರ್ವರಿಗೂ ಎನ್ನುವುದನ್ನು ಪಾಶ್ಚಾತ್ಯಮತಗಳಲ್ಲಿ ನೊಡುತ್ತೇವೆ. ಈ ಬಗೆಯ ನಿಯಂತ್ರಣ ಏಕರೂಪತೆ, ಅಧಿಕಾರ, ಸೇಡು ಮತ್ತು ಪ್ರತೀಕಾರಗಳ ಅಗತ್ಯವನ್ನು ಪಾಶ್ಚಾತ್ಯ ಏಕದೇವವಾದದ ಒಬ್ಬನೇ ದೇವರು ಸ್ವತಃ ವ್ಯಕ್ತಪಡಿಸುತ್ತಾನೆ.

ವಸಾಹತೀಕರಣದ ಯುಗದಲ್ಲಿ ಪಾಶ್ಚಾತ್ಯ. ಶಕ್ತಿಗಳು ಪೂರ್ವದೇಶಗಳ ಮೇಲೆ ಬಲಪ್ರಯೋಗದಿಂದಲೂ ಬೆದರಿಕೆಯಿಂದಲೂ ಪ್ರಲೋಭನೆಗಳಿಂದಲೂ ಸ್ಥಳೀಯ ಧರ್ಮಗಳನ್ನು ಅನಾಗರಿಕ ಎಂದು ಜರಿಯುವುದರ ಮೂಲಕ ನಾಗರಿಕ ಬೆಳವಣಿಗೆಗಾಗಿ ಮತಾಂತರ ಅನಿವಾರ್ಯ ಎಂಬ ಪ್ರವರ್ತನೆಯಿಂದ - ತಮ್ಮ ಮತವನ್ನು ಹೇರುವ ದಾರಿ ಹಿಡಿದವು. ಈಗ ವಸಾಹತೋತ್ತರ ಯುಗದಲ್ಲಿ ಪಾಶ್ಚಾತ್ಯ ಮತಗಳು ಪ್ರಜಾತಂತ್ರ ಮತ್ತು ಮಾನವಹಕ್ಕುಗಳ ಸೋಗಿನಲ್ಲಿ ಅದೇ ಮತಾಂತರ ಯತ್ನಗಳನ್ನು ಮುಂದುವರಿಸಿವೆ. ಭಾರತೀಯ ಧರ್ಮಗಳು ಇದನ್ನು ವಿರೋಧಿಸಿದಾಗ ಅವುಗಳಿಗೆ ಕೋಮುವಾದಿ, ಅಸಹಿಷ್ಣು ಅಥವಾ ಪ್ರಜಾಪ್ರಭುತ್ವ ವಿರೋಧಿ ಎಂಬ ಹಣೆಪಟ್ಟಿ ಹಚ್ಚಲಾಗುತ್ತದೆ.

ಸ್ವಯಂ ಪ್ರಜಾತಂತ್ರವೇ ಉಪಭೋಗವಾದೀ ಅಧಿಕಾರಶಾಹಿಯ ಕೈಯಲ್ಲಿ ಒಂದು ಸಾಧನವಾಗಿಬಿಟ್ಟಿದೆ. ಜನರನ್ನು, ಅವರ ಪ್ರಾಪಂಚಿಕ ಬಯಕೆಗಳನ್ನೂ, ಅವರ ಹೆಚ್ಚಿನ ಮನೋರಂಜನಾ ಬೇಡಿಕೆಗಳನ್ನೂ ಪೂರೈಸಿಕೊಡುವ ಅಥವಾ ಹೊಸಹೊಸ ಅನುಕೂಲತೆಗಳನ್ನು ಅವರಿಗೆ ಮಾಡಿಕೊಡುವ ಸಾಮರ್ಥ್ಯವೊಂದ ರಿಂದಾಗಿ ಸುಲಭವಾಗಿ ಆಳಬಹುದು. ಪೂರ್ವದ ದೃಷ್ಟಿಯಾದರೋ ಪ್ರಜಾ ತಾಂತ್ರಿಕ ಏಕರೂಪತೆಯಲ್ಲ, ಬದಲಿಗೆ ಭಿನ್ನಭಿನ್ನ ವ್ಯಕ್ತಿಗಳ ಹಾಗೂ ಜನ ಸಮೂಹಗಳ ಸಾಂಸ್ಕೃತಿಕ ಅಗತ್ಯಗಳನ್ನು ಗುರುತಿಸುವ ವ್ಯವಸ್ಥೆ.

ಸಮಾಜವನ್ನು ಮನುಷ್ಯದೇಹದಂತೆ ನಾವು ಭಾವಿಸಬೇಕು. ಶರೀರದಲ್ಲಿ ಕ್ರಿಯೆಗಳ ವೈವಿಧ್ಯವಿದ್ದರೂ ಒಟ್ಟು ಇರುವಿಕೆ ಎಂಬುದು ಒಂದೇ. ಜಗತ್ತಿನಲ್ಲಿ ನಿಜವಾದ ಸ್ವಾತಂತ್ರವಿರಬೇಕಾದರೆ, ಭೌತಿಕ ಮತ್ತು ಆಧ್ಯಾತ್ಮಿಕ ಸ್ವಾತಂತ್ರ

ಗಳೆರಡೂ ಬೇಕು. ಆರ್ಥಿಕವಾಗಿ, ರಾಜಕೀಯವಾಗಿ ಅಥವಾ ಮತೀಯವಾಗಿ ಎಲ್ಲ ರೀತಿಯ ಸಾಂಸ್ಕೃತಿಕ ಪ್ರಾಬಲ್ಯಗಳಿಂದಲೂ ಸ್ವಾತಂತ್ರ್ಯ ದೊರಕಬೇಕು.

ಆದರೂ, ಹಿಂದೂ ಚಿಂತನೆಯ ಮತ್ತು ಸಂಸ್ಕೃತಿಯ ಕೆಲವು ವಿಶಿಷ್ಟ ಅಂಶಗಳು ಇಂದಿನ ಏಕಸಂಸ್ಕೃತಿಯೊಳಗೂ ಜನಪ್ರಿಯ ಅಥವಾ ಆರ್ಥಿಕವಾಗಿಯೂ ವ್ಯವಹಾರ್ಯವಾಗಬಲ್ಲವು. ಯೋಗದ ಆಂದೋಲನಗಳಲ್ಲಿ ಇದನ್ನು ಕಾಣಬಹುದು. ಈಗಾಗಲೇ ಯೋಗವನ್ನು ಎಲ್ಲೆಡೆ ಸಮೂಹ ಮಾರುಕಟ್ಟೆ, ಫ್ರ್ಯಾಂಚೈಸ್ ವ್ಯಾಪಾರೀ ವ್ಯವಸ್ಥೆಗೆ ಅಳವಡಿಸಲಾಗಿದೆ. ಈಗ ಅದರಿಂದಾಗಿ ಪಾಶ್ಚಾತ್ಯ ಸಂಸ್ಕೃತಿಯ ಆಧ್ಯಾತ್ಮೀಕರಣವಾಗುತ್ತದೋ ಅಥವಾ ಅದು ಪೂರ್ವದೇಶಗಳ ಆಧ್ಯಾತ್ಮಿಕ ಸಂಪ್ರದಾಯಗಳನ್ನೇ ಕುಲಗೆಡಿಸುತ್ತದೋ ಎಂಬುದನ್ನು ಕಾದು ನೋಡಬೇಕಾಗಿದೆ.

ಅಲ್ಲಲ್ಲಿ ಆಧ್ಯಾತ್ಮಿಕತೆಯೆಡೆಗಿನ ಇಂತಹ ಒಲವುಗಳು ಮೂಡುತ್ತಿರುವುದಕ್ಕೆ ಏಕಸಂಸ್ಕೃತಿಯು ಜನರಲ್ಲಿ ಆಂತರಿಕ ಶೂನ್ಯತೆಯನ್ನು ತುಂಬಿರುವುದೇ ಕಾರಣ. ಭೌತಿಕವಸ್ತು ಸಮೃದ್ಧಿಯು ಆಧ್ಯಾತ್ಮಿಕ ಬಡತನ ಮತ್ತು ಮಾನಸಿಕ ವೈಕಲ್ಯವನ್ನು ಉಂಟುಮಾಡಿದೆ. ಇದಕ್ಕೆ ಇನ್ನೂ ಒಂದು ಕಾರಣ ಏನೆಂದರೆ ಆಕರ್ಷಕವಾದ ಹಿಂದೂಧರ್ಮ ಮತ್ತು ಅದರ ಗುರುಗಳು, ದೇವತೆಗಳು ಮತ್ತು ಯೋಗಸಾಧನೆಗಳಿಗೆ ಹೋಲಿಸಿದಾಗ - ಪಾಶ್ಚಾತ್ಯ ಮತಗಳು ಬರಡು ಮತ್ತು ಸಣ್ಣ ವಿಚಾರವಾಗಿರುವುದು. ಏಕಸಂಸ್ಕೃತಿಯನ್ನು ಚೆನ್ನಾಗಿ ಅಧ್ಯಯನ ಮಾಡಿ ಅದರ ಇತಿಮಿತಿಗಳ ಬಗ್ಗೆಯಾರು ಚೆನ್ನಾಗಿ ತಿಳಿದುಕೊಂಡಿದ್ದಾರೋ ಅವರು ಪೂರ್ವದೇಶಗಳ ಧಾರ್ಮಿಕ ಸಂಪ್ರದಾಯಗಳ ಕಡೆಗೆ ಆಕರ್ಷಿತರಾಗುವ ಸಂಭವವೇ ಹೆಚ್ಚು.

ಹಾಗಾದರೆ, ಹಿಂದೂಸಂಸ್ಕೃತಿಯು ಏಕ ಸಂಸ್ಕೃತಿಯನ್ನು ಜಯಿಸುವಷ್ಟು, ಕಾಲಸರಿದಂತೆ ಅದನ್ನು ತನ್ನೊಳಗೇ ಸೇರಿಸಿಕೊಂಡು ಜೀರ್ಣಿಸಿಕೊಳ್ಳುವಷ್ಟು ವೈವಿಧ್ಯಪೂರ್ಣವಾಗಿದೆಯೇ, ಶ್ರೀಮಂತವಾಗಿದೆಯೇ - ಎಂಬ ಪ್ರಶ್ನೆ ಏಳುತ್ತದೆ. ಅಂತಿಮವಾಗಿ ಅದು ಹಾಗೆ ಮಾಡಬಲ್ಲುದು ಎಂಬುದರಲ್ಲಿ ಸಂದೇಹವೇ ಇಲ್ಲ. ಸಮಸ್ಯೆ ಇರುವುದು, ಎಷ್ಟು ಸಮಯ, ಎಷ್ಟು ಪ್ರಯತ್ನ ಏಕಸಂಸ್ಕೃತಿಯ ಬದಲಾವಣೆಗೆ ಬೇಕಾಗುತ್ತದೆ ಎನ್ನುವುದರಲ್ಲಿ. ಇದೆಲ್ಲ ನಡೆಯಬೇಕಾದರೆ ಹಿಂದೂ ಚಿಂತನೆ ಮತ್ತು ದೈವತ್ವವನ್ನು ಕುರಿತ ಅದರ ವೈವಿಧ್ಯಮಯವಾದ ಜ್ಞಾನಗಳು ಹೊಸ ಚಿಂತನ ಚೌಕಟ್ಟಿನ ಅಂಗವಾಗಬೇಕು. ಕಾಲಕಳೆದಂತೆ, ವೈವಿಧ್ಯವನ್ನು ಬಯಸುವ ಮನುಷ್ಯನ ಸಹಜ ಒತ್ತಡಗಳು ಏಕಸಂಸ್ಕೃತಿಗೆ ವಿರುದ್ಧವಾಗಿ ಎದ್ದುನಿಂತಾವು.

ಜಾಗತಿಕ ಏಕರೂಪತೆಯ ಕಡೆಗಿನ ಪಯಣವನ್ನು ಕೈಬಿಡಲೇಬೇಕು. ಬರೀ ಭೌತಿಕವಾಗಿ ಮಾತ್ರವಲ್ಲ, ಆಧ್ಯಾತ್ಮಿಕವಾಗಿಯೂ ಸಹ ಇದಾಗಬೇಕು. ನಿಜವಾದ ಜಾಗತೀಕ ಭಾವನೆ ಏಕಸಂಸ್ಕೃತಿಯ ಉಪಭೋಗವಾದದ್ದಾಗಿರಬೇಕಿಲ್ಲ. ಬದಲಿಗೆ, ಸ್ಥಳೀಯ ಪರಿಸರ ಮತ್ತು ಸಂಸ್ಕೃತಿಗಳ ಮೇಲೆ ತೋರುವ ಗೌರವವನ್ನು ಅದು ಆಧರಿರಬೇಕು. ನಿಜವಾದ ಸಂಸ್ಕೃತಿ ಎಂದಿಗೂ ವಾಣಿಜ್ಯದ ಸರಕಲ್ಲ; ಅದು ಬೆಲೆ ಕಟ್ಟಲಾಗದ್ದು. ಪ್ರಜ್ಞೆಯೊಳಗೇ ಅದು ನೆಲಸಿದೆ; ಅದೇ ಮನಸ್ಥಿತಿಯಲ್ಲೂ ಈ ಜಗತ್ತಿನೊಡನೆಯ ಸಾಮರಸ್ಯದಲ್ಲೂ ನೆಲಸಿದೆ. ಮಾರುಕಟ್ಟೆಯ ಇತ್ತೀಚಿನ ಒಲವುಗಳ ಹಿಂದೆ ಬೀಳುವುದರಿಂದ ಅದು ಸಿದ್ಧಿಸಲಾರದು. ಅದನ್ನು ಕಂಡುಕೊಳ್ಳ ಬೇಕಾದರೆ ನಮ್ಮ ಈಗಿನ 'ಯಂತ್ರ'ಗಳನ್ನೆಲ್ಲಾ ಬದಿಗಿರಿಸಿ ನಮ್ಮೊಳಗೇ ಹುಡುಕತೊಡಗಬೇಕು.

(ಮೂಲ ಇಂಗ್ಲಿಷ್: 'Hinduism and Clash of Civilizations' by David Frawley· ★

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

–ಪ್ರಕಾಶಕರು

ಪರಕೀಯತೆ

– ಡಾ|| ಹೆಚ್. ರಾಮಚಂದ್ರ ಸ್ವಾಮಿ

ಪರಕೀಯತೆಯ ಭಾವನೆ ಮಾನವನ ಮನಸ್ಸಿನಲ್ಲಿಯೇ ಅಡಗಿರುವ ಬಹು ದೊಡ್ಡ ಶತ್ರು. ಇದು ವೈಯಕ್ತಿಕವಾಗಿರಬಹುದು. ಅಥವಾ ಸಾಮಾಜಿಕ, ರಾಜಕೀಯ ಸಹ ಆಗಿರಬಹುದು. ತನ್ನ ಜೀವನವನ್ನು ಮುನ್ನಡೆಸಲು ಅಗತ್ಯವಾದ ಅಂತಶ್ಶಕ್ತಿ ಇಲ್ಲದವನಿಗೆ ತಾನೇ ತನಗೆ ಅನ್ಯನಾಗಿ ಕಾಣಿಸಬಹುದು; ತಾನೇ ಬಾಳಿದ ತನ್ನ ಜೀವನದ ಸಂಗತಿಗಳೇ ವಿಚಿತ್ರವಾಗಿಯೂ ಅಸಂಭವವಾಗಿಯೂ ತೋರಬಹುದು; ತಾನು ಯಾರೆಂಬುದರ ಬಗ್ಗೆ ಕೂಡ ಎಚ್ಚರವಿಲ್ಲದೆ ಹೋಗಬಹುದು. ತೀರ ಅತಿರಿಕ್ತ ಸಂದರ್ಭಗಳಲ್ಲಿ ಅಂತಹ ವ್ಯಕ್ತಿಗೆ ತನ್ನ ದೇಹ ಸಹ ತನ್ನದಲ್ಲ ಎನ್ನಿಸಿಬಿಡಬಹುದು.

ಪರಕೀಯತೆಯನ್ನು ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಪರಿಗಣಿಸುವುದಾದಲ್ಲಿ, ವ್ಯಕ್ತಿಗೆ ತನ್ನೊಡನಿರುವ ಸಂಬಂಧದಿಂದ ಸಮಾಜದೊಂದಿಗೆ ಅವನಿಗಿರುವ ಸಂಬಂಧಕ್ಕೆ ಬರಬೇಕಾಗುತ್ತದೆ. ಸಮಾಜ ಹಾಗೂ ಸಾರ್ವಜನಿಕ ಸಂಸ್ಥೆಗಳೊಂದಿಗೆ ವ್ಯಕ್ತಿಯು ಹೊಂದಾಣಿಕೆ ಸಾಧ್ಯವಿಲ್ಲದಿದ್ದಾಗ ಅವನು ಪರಕೀಯನಾಗುತ್ತಾನೆ. ಅಂತಹ ವ್ಯಕ್ತಿಗೆ ಸಮಾಜ ಮತ್ತು ಅದರ ಸಂಸ್ಥೆಗಳು ತನ್ನ ವ್ಯಾಪ್ತಿಗೆ ಮೀರಿದವು, ತನ್ನ ಗ್ರಹಿಕೆಗೆ ಸಿಕ್ಕದಂತಹವು ಎನ್ನಿಸುತ್ತದೆ. ಅವುಗಳ ವ್ಯವಹಾರಗಳಲ್ಲಿ, ಆಗುಹೋಗುಗಳಲ್ಲಿ ಅವನು ಸಕ್ರಿಯವಾಗಿ ಭಾಗವಹಿಸಲಾರ. ತನ್ನಲ್ಲಿ ತಾನು ಪರಕೀಯನಾದವನು ತನ್ನತನವನ್ನು (Self-identity) ಕಳೆದುಕೊಳ್ಳುತ್ತಾನೆ. ಸಾಮಾಜಿಕವಾಗಿ ಪರಕೀಯನಾದವನಿಗೆ ಇಂತಹ ನಷ್ಟವೇನಿಲ್ಲವಾದರೂ ಭಾಗವಹಿಸುವಿಕೆ ಇಲ್ಲವಾಗುವುದರಿಂದ ಆ ಮೂಲಕ ಸಿಕ್ಕುವ ಸಮಾಜದ ಮೇಲಣ ಅಲ್ಪ ಸ್ವಲ್ಪ ಹಿಡಿತವೂ ಇಲ್ಲವಾಗುತ್ತದೆ. ತಾನು ಬೇರೆ, ಸಮಾಜ ಬೇರೆ ಎಂಬ ಭಾವವನ್ನು ಗೆಲ್ಲುವುದು ಅವನಿಗೆ ಸಾಧ್ಯವಾಗುವುದಿಲ್ಲ. ಸಮಾಜದಲ್ಲಿ ತಾನು ನಿರ್ವಹಿಸಬೇಕಾದ ಪಾತ್ರ, ಇಲ್ಲದೆ, ಚಲಾಯಿಸಬಹುದಾದ ಹಕ್ಕಾಗಲಿ, ಗಳಿಸಬಹುದಾದ ಸ್ಥಾನವಾಗಲಿ ಅವನಿಗೆ ಪ್ರಾಪ್ತವಾಗುವುದಿಲ್ಲ. ತಾನೇ ಸಮಾಜವನ್ನು ದೂರ ಮಾಡಿದರೂ, ಸಮಾಜವೇ ತನ್ನನ್ನು ದೂರ ಮಾಡಿದೆ ಎಂದೇ ಅವನ ಅನಿಸಿಕೆ. ಅನ್ಯತೆಯನ್ನು ಗೆಲ್ಲಲಾರದ ಇವನ ಪರಿಸ್ಥಿತಿ ಸಮಾಜಕ್ಕೆ ಮೊದಲು ದೋಷವಾಗಿ, ಆಮೇಲೆ ಕಾಯಿಲೆಯಾಗಿ ಕಾಣಿಸುತ್ತದೆ. ವ್ಯಕ್ತಿಯು ಈ ನೆನೆಗುದಿಗೆ ತಾನೂ ಕಾರಣ ಹೊಣೆ ಎಂದು ಸಮಾಜಕ್ಕೆ ಅನ್ನಿಸುವುದೇ ಇಲ್ಲ. ಹೀಗಾದಾಗ ವ್ಯಕ್ತಿ ವಾಸ್ತವದೊಂದಿಗೆ ಸಂಬಂಧವನ್ನು ಕಳೆದುಕೊಳ್ಳುತ್ತಾನೆ: ನಂತರ ವಾಸ್ತವಿ

ಕಡೆಯನ್ನೇ ಪ್ರಶ್ನಿಸುತ್ತಾನೆ. ಅವನ ವೈಯಕ್ತಿಕ ಬದುಕು "ಬಹುಜನ ನಡೆವುದೆ ದಾರಿ ಯಿಂದ" ಬೇರ್ಪಟ್ಟು ಭಿನ್ನವಾಗುತ್ತದೆ. ಹೀಗೆ ವ್ಯಕ್ತಿಚೇತನದ ವೈಯಕ್ತಿಕ ಪಥವೂ ಸಾಮಾಜಿಕ ಪಥವೂ ಬೇರೆ ಬೇರೆ ಎಂದು ತೋರಿದರೂ ಪರಸ್ಪರ ಸಂಬಂಧಿಸಿದುವುಗಳಾಗಿವೆ; ಸಮಾಜದಿಂದ ವ್ಯಕ್ತಿಯ ನಿರ್ಮಾಣ ಮತ್ತು ವ್ಯಕ್ತಿಯಿಂದ ಸಮಾಜದ ನಿರ್ಮಾಣ ಹೀಗೆ ಇವೆರಡರಲ್ಲಿ ಪರಸ್ಪರ ಸಂಬಂಧವಿದೆ.

ವ್ಯಕ್ತಿ ತನ್ನ ವಿಶಿಷ್ಟವಾದ ಗುಣಸಮುದಾಯವನ್ನೊಳಗೊಂಡ ಆತ್ಮಾಭಿವ್ಯಕ್ತಿಯನ್ನು ನಿರಂತರವಾಗಿ ಅಂತಸ್ಫೂರ್ತಿಯಿಂದ ಕಾಪಾಡಿಕೊಂಡು ಬರಬೇಕೆಂದು ಸಮಾಜವು ನಿರೀಕ್ಷಿಸುತ್ತದೆ. ಹಾಗೆಯೇ ವ್ಯಕ್ತಿಯು ತಾನು ತನ್ನತನದ ಮಿತಿಗಳನ್ನು ಮೀರಿ ಸಮಾಜ ಜೀವನದಲ್ಲಿ ನೆಲೆಗೊಳ್ಳಲು, ಸಾಮಾಜಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಉಪಯುಕ್ತವಾಗಿಸಲು ತನ್ನ ಅಳಿಲು ಸೇವೆಯನ್ನು ಸಲ್ಲಿಸುವುದಕ್ಕೆ ಸಮಾಜವು ಅನುವುಮಾಡಿಕೊಡಬೇಕೆಂದು ನಿರೀಕ್ಷಿಸುತ್ತಾನೆ. ಸಮಾಜದಲ್ಲಿ ಬೆರೆಯುವುದರಿಂದ ವ್ಯಕ್ತಿ ತನ್ನ ವಿಶೇಷ "ವ್ಯಕ್ತಿತ್ವ" ವನ್ನೇನೂ ಕಳೆದುಕೊಳ್ಳುವುದಿಲ್ಲ; ತನ್ನ ಅಸ್ತಿತ್ವವನ್ನು ಭಾಗಶಃ ತೊಡಗಿಸಿ ಸಮಾಜದ ಮುನ್ನಡೆಗೆ ಕಾರಣನಾಗಬಯಸುತ್ತಾನೆ.

"ಉತ್ಪಾದನೆ" ಮಾಡುವ ವ್ಯವಸಾಯಗಾರ ಅಥವಾ ಕಾರ್ಖಾನೆ ಕಾರ್ಮಿಕ ತನ್ನಿಂದಾಗಿ ಜನಿಸುವ ಉತ್ಪನ್ನವಸ್ತುವಿಶೇಷದಿಂದಾಗಿ ವಿಶಿಷ್ಟನಾಗುತ್ತಾನೆಯಾದರೂ ಆ ವಸ್ತು ಅವನ ಕೈಯಿಂದ ಇನ್ನೊಬ್ಬನ ಕೈಗೆ ಸೇರಿದಮೇಲೆ ಆ ಕರ್ಮಿ ಅನ್ಯನಾಗುತ್ತಾನೆ, ಪರಕೀಯನಾಗುತ್ತಾನೆ. ಇದು ಹೇಗೆಂದು ಮೊಟ್ಟಮೊದಲು ಚಿಂತನೆ ನಡೆಸಿದವನು ಜರ್ಮನಿಯ ಕಾರ್ಲ್ ಮಾರ್ಕ್ಸ್. ಕಾರ್ಮಿಕನು ಪರಕೀಯನಾಗಲು ಕಾರಣ ಕರ್ಮವು ಯಾಂತ್ರಿಕವಾಗಿರುವುದೇ. ಅಡಿಕೆಯ ಗುಣಮಟ್ಟವು ಅದರ ಯಾರು ಯಜಮಾನರು, ಯಾರು ಬೇಸಾಯ ಮಾಡಿದ್ದು, ಯಾರು ಗೊನೆ ತೆಗೆದದ್ದು ಇತ್ಯಾದಿಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಕರ್ಮದಲ್ಲಿ ಕಾರ್ಮಿಕನಿಂದ ಹೊರತಾಗಿರುವ ಕಾರ್ಮಿಕನ ಸೃಷ್ಟಿಕ್ರಿಯೆಗೆ ಮತ್ತು ಕಲೆಗೆ ಅವಕಾಶವೆಲ್ಲಿ? ಆದ್ದರಿಂದಲೇ ಉತ್ಪನ್ನ ವಸ್ತುವಿನೆದುರು, ಅದರ ವಾಣಿಜ್ಯ ಮೌಲ್ಯದೆದುರು, ಅದನ್ನು ಉತ್ಪತ್ತಿಮಾಡಿದ ಕಾರ್ಮಿಕ ಪರಕೀಯನಾಗುತ್ತಾನೆ.

ಅಷ್ಟೇ ಅಲ್ಲ, ಅವನು ಅವನಾಗಿರುವಾಗ ಕೆಲಸ ಮಾಡಲಾರ, ಕೆಲಸ ಮಾಡುವ ಅವನು ಅವನಾಗಿರಲಾರ; ಆದ್ದರಿಂದ ಸಮಾಜದಲ್ಲಿ ಪರಕೀಯನಾಗಿರುವುದರ ಜೊತೆಗೆ ತನ್ನೊಳಗೂ ತಾನು ಅನ್ಯನಾಗುತ್ತಾನೆ. ಮಾಡಲೇಬೇಕಾಗಿ ಬಂದ, ಅಥವಾ ಹೇರಲ್ಪಟ್ಟ ಕರ್ಮದಲ್ಲಿ ಸ್ವಾತಂತ್ರ್ಯ, ಸಂತೋಷ, ಸೃಜನಶೀಲತೆ

ಸಾಧ್ಯವೇ? ಹೀಗಾದಾಗ ಆ ಕರ್ಮವು ಅವಶ್ಯಕತೆಗಳ ಪೂರೈಕೆಗಳ ಸಾಧನವಾಗುತ್ತದೆಯೇ ಹೊರತು ಅದೇ ಅವಶ್ಯಕಕರ್ಮವಾಗುವುದಿಲ್ಲ.

ಕರ್ಮ ಮತ್ತು ಕಾರ್ಮಿಕರ ನಡುವಣ ಈ ಸಂಬಂಧದ ವಿಕ್ಷಿಪ್ತತೆಗೆ ವಾಣಿಜ್ಯ ಕ್ಷೇತ್ರದ ಆರ್ಥಿಕ ಕಬಂಧಬಾಹುವನ್ನೂ ಸೇರಿಸಬೇಕು. ಇಲ್ಲಿ ಕರ್ಮವು ಮಾನವನ ಅಭಿವ್ಯಕ್ತಿಯಾಗುವುದರ ಬದಲು ಮಾರಾಟದ ಸರಕಾಗುತ್ತದೆ, ಬದುಕಿ ಉಳಿಯುವ ಹೋರಾಟದ ಏಕೈಕ ಉಪಾಯವಾಗುತ್ತದೆ. ಈ ಗುರಾಣಿಯು ಹಿಂದಿರುವ ವ್ಯಕ್ತಿಯು ಪ್ರಕಾಶಕ್ಕೆ ಬರಲಾಗುವುದೇ ಇಲ್ಲ. ಹೀಗೆ ಪರಕೀಯತೆಗೆ ಕಾರಣಗಳೆಂದರೆ (೧) ಕರ್ಮವು ಕರ್ಮಿಯಿಂದ ಬೇರ್ಪಡುವುದು; (೨ ಕರ್ಮವು ಮಾರಾಟದ ಸರಕಾಗುವುದು; ೩) ಕರ್ಮಿಯು ತನ್ನದೇ ಕರ್ಮಕ್ಕೆ ದಾಸನಾಗುವುದು ಮತ್ತು ೪) ಆರ್ಥಿಕ ಪ್ರಾಮುಖ್ಯವು ಕಲೆಯನ್ನೂ, ಸೃಜನಶೀಲತೆಯನ್ನೂ ದೂರಮಾಡುವುದು. ವಂಚಕನೊಬ್ಬನು ಹಣದ ಪ್ರಭಾವದಿಂದ ಪ್ರಾಮಾಣಿಕ ಸಮಾಜಸೇವಕನೆನ್ನಿಸಿಕೊಳ್ಳಬಹುದಾದರೆ ಪ್ರಾಮಾಣಿಕ ಪರೋಪಕಾರಿಗೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲ. "ಛೇ, ಪಾಪದವ" ಎನ್ನುತ್ತಲೇ ಸಮಾಜ ಅವನನ್ನು ಇನ್ನಷ್ಟು ಶೋಷಿಸುತ್ತದೆ.

ಮಾರಾಟಕ್ಕಿರುವ ಕುಶಲಕರ್ಮದ ಬೆಲೆ ಕೌಶಲ್ಯ, ಕಲೆಗಳನ್ನಾಧರಿಸುವುದರ ಬದಲು ಕುಶಲ ಕರ್ಮಿಗಳ ಸಂಖ್ಯೆಯ ಮೇಲೆ ನಿರ್ಧಾರಿತವಾಗುತ್ತದೆ. ಹೆಚ್ಚು ಕರ್ಮಿಗಳು ಲಭ್ಯವಾದಂತೆ ಕರ್ಮದ ಬೆಲೆ ಇಳಿಯುತ್ತದೆ. ಇದೇ ಶೋಷಣೆಯ ಮೂಲ. ಇದರಿಂದ ಕರ್ಮಿ ಬಡವನಾಗುತ್ತ ಹೋಗುತ್ತಾನೆ; ಅವನ ಕೆಲಸವನ್ನು ಕೊಳ್ಳುವವ ಶ್ರೀಮಂತನಾಗುತ್ತ ಹೋಗುತ್ತಾನೆ. ಕೆಲಸದ ಅವಧಿ, ಉತ್ಪನ್ನದ ಪ್ರಮಾಣ ಇಂಥವೇ ನಿರ್ಣಾಯಕವಾಗುತ್ತವೆ. ಬದುಕಿನ ಅವಶ್ಯಕತೆಗಳಿಗಾಗಿ ಕರ್ಮಕೌಶಲ್ಯವನ್ನು ಮಾರಬೇಕಾಗಿ ಬಂದವನಿಗೆ ಸಾಮಾಜಿಕ ಶ್ರೇಷ್ಠತೆಗಳೂ ಇಲ್ಲ; ತನ್ನೊಳಗೂ ತನಗೆ ಈ ಭಾವನೆಗಳು ಸಾಧ್ಯವಾಗದೆ ಅತೃಪ್ತನಾಗಬೇಕಾಗುತ್ತದೆ. ಮಾರ್ಕ್ಸ್ ಪ್ರಕಾರ ಪರಕೀಯತೆಗೆ ಮುಖ್ಯ ಕಾರಣವೆಂದರೆ ಸಮಾಜವು ವ್ಯಕ್ತಿಗೆ ಅವನ ಕರ್ಮಕ್ಕೆ ಅನುಸಾರವಾಗಿ ಕೊಡುವ ಸ್ಥಾನದಲ್ಲಿ ಅವನು ಇರಬೇಕಾಗುವುದು ಮತ್ತು ಅಂತಹ ಸ್ಥಾನಕ್ಕೆ ಸಮಾಜವು ನಿರ್ದೇಶಿಸುವ ನೀತಿವಂತಿಕೆಯನ್ನು ಒಪ್ಪಿಕೊಳ್ಳಬೇಕಾಗಿ ಬರುವುದು. ಉದಾಹರಣೆಗೆ, ಸಾಮಾನ್ಯವಾಗಿ ನಿರೀಕ್ಷಿಸಬಹುದಾದಂತೆ ಕಾರ್ಖಾನೆ ಕಾರ್ಮಿಕರು ಕುಡುಕರಾಗಿರುತ್ತಾರೆ. ಅಭಿಯಂತ, ಆರಕ್ಷಕ, ಅರಣ್ಯ ರಕ್ಷಕ ಇತ್ಯಾದಿ ಜನ ಲಂಚಕೋರರಾಗಿರುತ್ತಾರೆ ಮತ್ತು ಉಪಾಧ್ಯಾಯ ದುರ್ವ್ಯಸನಗಳಿಲ್ಲದೆ ಶೀಲವಂತನಾಗಿರುತ್ತಾನೆ ಇತ್ಯಾದಿ. ಸೂಕ್ಷ್ಮಸಂವೇದಿಯೊಬ್ಬ ಕಾರ್ಖಾನೆ ಕಾರ್ಮಿಕನಾದರೆ, ಶೀಲವಂತ ಆದರ್ಶವ್ಯಕ್ತಿ ಮರಾಮತ್ತು ಇಲಾಖೆಯಲ್ಲಿದ್ದರೆ, ಭ್ರಷ್ಟ ದುರ್ವ್ಯಸನಿ ಉಪಾಧ್ಯಾಯ ವೃತ್ತಿ

ಯಲ್ಲಿದ್ದರೆ? ಸಮಾಜದ ನಿರೀಕ್ಷೆಯಂತೆ ಇರಲಾಗದೆ ತನ್ನೊಳಗೆ ತಾನು ಪರಕೀಯನಾಗಬೇಕಾಗುತ್ತದೆ.

ಸಮಾಜವು ವ್ಯಕ್ತಿಯನ್ನು ಉದ್ದೇಶಸಾಧನೆಯ ಮಾಧ್ಯಮವನ್ನಾಗಿ, ಅಷ್ಟೇ ಏಕೆ, ಸಾಮಾಜಿಕ ಸಂಸ್ಥೆಗಳ ತೀರ್ಮಾನವನ್ನು ಜಾರಿಗೆ ತರುವ ಮಾಧ್ಯಮವನ್ನಾಗಿ, ಬಳಸಿಕೊಂಡಾಗ ವ್ಯಕ್ತಿ ಪರಕೀಯನಾಗಬೇಕಾಗುತ್ತದೆಯೇನೋ ಸರಿ. ಆದರೆ ವ್ಯಕ್ತಿ ಸಂಪೂರ್ಣವಾಗಿ ಈ ಮಾಧ್ಯಮದಲ್ಲಿ ಐಕ್ಯವಾಗಬೇಕಾದ ಅಗತ್ಯವೇನಿಲ್ಲ. ಸಮಾಜದ ತಾಳಕ್ಕೆ ಸಂಪೂರ್ಣವಾಗಿ ಕುಣಿಯುವ ವ್ಯಕ್ತಿ ಇರಲು ಅಸಾಧ್ಯ. ವ್ಯಕ್ತಿಯ ಅಂತಃಸ್ಫುರಣ ಯಾವುದೇ ಸಾಮಾಜಿಕ ಸಂಸ್ಥೆಯ ಆಗುಹೋಗುಗಳಿಂದ ಮುಳುಗಲೂ ಆರದು, ಬೆಳಗಲೂ ಆರದು. ಇಡಿಯ ಚೇತನ ಅಂತಃಸ್ಫೂರ್ತಿಯಿಂದಲೇ ತುಂಬಿಹೋಗುವುದೂ ಅಸಾಧ್ಯ. ಮಾತಿನ ಮೂಲಕವಾಗಲಿ, ಬರಹದ ಮೂಲಕವಾಗಲಿ ಅವನು ತನ್ನ ಅಂತಃಸ್ಫೂರ್ತಿಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲಾರ. ಭಾಷೆ ಅಲ್ಪ ಸ್ವಲ್ಪ ಅವನದ್ದೇ. ವಿಶೇಷವನ್ನು ಸಂವಹಿಸಬಹುದಾದರೂ, ಭಾಷೆಯೂ ಅವನಿಗೆ ಎರವಲು ಬಂದದ್ದೇ ಆದ್ದರಿಂದ ವ್ಯಕ್ತಿ ಭಾಷೆಯಿಂದಲೂ ಅನ್ಯನಾಗುತ್ತಾನೆ. ತನ್ನನ್ನು ತಾನು ಅಭಿವ್ಯಕ್ತಿಗೊಳಿಸಲು ಇರುವ ಏಕೈಕ ಉಪಕರಣವೂ ಅವನದ್ದಲ್ಲ! ಸಮಾಜದ ಪರಿಷ್ಕಾರವೂ ವ್ಯಕ್ತಿಯ ಅಂತಃಸ್ಫುರಣವೂ ಒಂದಾಗುವುದು ಸಾಧ್ಯವೂ ಅಲ್ಲ, ಮಾನವೀಯ ಸೃಜನಶೀಲತೆಯ ದೃಷ್ಟಿಯಿಂದ ಅದು ಅಪೇಕ್ಷಣೀಯವೂ ಅಲ್ಲ. ವೈಯುಕ್ತಿಕತೆ ಎಲ್ಲಿ ಇರುವುದಿಲ್ಲವೋ ಅಲ್ಲಿ ಪರಕೀಯತೆ ಇರುತ್ತದೆ.

ಶೋಷಿತ ವ್ಯಕ್ತಿಯ ಪರಕೀಯತೆ ಅಸಹಾಯಕತೆಗಳು ಕೆಡುಕುಗಳಾದರೂ, ಸಮಾಜರಚನೆ ಮತ್ತು ಸಂಸ್ಥೆಗಳ ಸ್ಥಾಪನೆಯಲ್ಲಿ ಪಾತ್ರವಹಿಸುವ ವ್ಯಕ್ತಿಗಳ ಪರಕೀಯತೆ (ಒಳ್ಳೆಯದಲ್ಲದಿದ್ದರೂ) ಕೆಡುಕಂತೂ ಅಲ್ಲ. ಸಂಸ್ಥೆಗಳಿಗಾಗಿ ದುಡಿಯುವುದು, ದಾನಮಾಡುವುದು ಇತ್ಯಾದಿಗಳೂ ಭಾಷೆ ಹೇಗೋ ಹಾಗೆ ವ್ಯಕ್ತಿಯ ಅಂತಃಸ್ಫುರಣದ ಅಭಿವ್ಯಕ್ತಿಗಳೇ. ಸಮಾಜಕ್ಕಾಗಿ ಅರಳಿಕೊಂಡವನ ಪರಕೀಯತೆ ಅವನ ಅಹಂಕಾರವನ್ನು ಕಡಿಮೆಮಾಡಿ, ತ್ಯಾಗೀಶ್ವರನ ಪಟ್ಟಕಟ್ಟಿ ಧನ್ಯತೆಯನ್ನುಂಟುಮಾಡುವುದರಿಂದ ಅದು ಅವನಿಗೆ ಮನೋರೋಗವಾಗಿ ಪರಿಣಮಿಸುವುದಿಲ್ಲ. ಬದಲಿಗೆ ಅಂತಃಸ್ಫುರಣದ ಆಸ್ಫೋಟನೆಗೆ ಒಂದು ಅರ್ಥ, ಒಂದು ಗುರಿ, ಒಂದು ಪ್ರಯೋಜಕ ದೃಷ್ಟಿ ಇವುಗಳನ್ನು ಕೊಡುತ್ತದೆ. ಸಂಸ್ಥೆ, ಸಮಾಜ, ರಾಜ್ಯ, ದೇಶ ಇತ್ಯಾದಿ ಒಕ್ಕೂಟಗಳೆಲ್ಲ ಮಾನವನಿರ್ಮಿತಗಳೆ, ಮಾನವನ ರೂಪರಹಿತ ಅಂತ:ಸ್ಫುರಣದ ಸಾಕಾರಗಳೆ. ತಮ್ಮನ್ನು ಸೃಜಿಸಿದ ಎಲ್ಲ ವ್ಯಕ್ತಿಗಳನ್ನೂ ಮೀರಿ ನಿಂತ ಈ ಸಾಕಾರಗಳು ಮುಂಬರುವ ಸಮಾಜಕ್ಕೆ, ವ್ಯಕ್ತಿಗಳಿಗೆ ಸಂಪ್ರದಾಯದ, ನಡತೆಯ, ಧೋರಣೆಯ ಮೇಲ್ಪಂಕ್ತಿಗಳನ್ನು ಹಾಕಿಕೊಡುತ್ತವೆ.

ಪರಕೀಯತೆ

– ಡಾ|| ಹೆಚ್. ರಾಮಚಂದ್ರ ಸ್ವಾಮಿ

ಪರಕೀಯತೆಯ ಭಾವನೆ ಮಾನವನ ಮನಸ್ಸಿನಲ್ಲಿಯೇ ಅಡಗಿರುವ ಬಹು ದೊಡ್ಡ ಶತ್ರು. ಇದು ವೈಯಕ್ತಿಕವಾಗಿರಬಹುದು. ಅಥವಾ ಸಾಮಾಜಿಕ, ರಾಜಕೀಯ ಸಹ ಆಗಿರಬಹುದು. ತನ್ನ ಜೀವನವನ್ನು ಮುನ್ನಡೆಸಲು ಅಗತ್ಯವಾದ ಅಂತಶ್ಶಕ್ತಿ ಇಲ್ಲದವನಿಗೆ ತಾನೇ ತನಗೆ ಅನ್ಯನಾಗಿ ಕಾಣಿಸಬಹುದು; ತಾನೇ ಬಾಳಿದ ತನ್ನ ಜೀವನದ ಸಂಗತಿಗಳೇ ವಿಚಿತ್ರವಾಗಿಯೂ ಅಸಂಭವವಾಗಿಯೂ ತೋರಬಹುದು: ತಾನು ಯಾರೆಂಬುದರ ಬಗ್ಗೆ ಕೂಡ ಎಚ್ಚರವಿಲ್ಲದೆ ಹೋಗಬಹುದು. ತೀರ ಅತಿರಿಕ್ತ ಸಂದರ್ಭಗಳಲ್ಲಿ ಅಂತಹ ವ್ಯಕ್ತಿಗೆ ತನ್ನ ದೇಹ ಸಹ ತನ್ನದಲ್ಲ ಎನ್ನಿಸಿಬಿಡಬಹುದು.

ಪರಕೀಯತೆಯನ್ನು ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಪರಿಗಣಿಸುವುದಾದಲ್ಲಿ, ವ್ಯಕ್ತಿಗೆ ತನ್ನೊಡನಿರುವ ಸಂಬಂಧದಿಂದ ಸಮಾಜದೊಂದಿಗೆ ಅವನಿಗಿರುವ ಸಂಬಂಧಕ್ಕೆ ಬರಬೇಕಾಗುತ್ತದೆ. ಸಮಾಜ ಹಾಗೂ ಸಾರ್ವಜನಿಕ ಸಂಸ್ಥೆಗಳೊಂದಿಗೆ ವ್ಯಕ್ತಿಯ ಹೊಂದಾಣಿಕೆ ಸಾಧ್ಯವಿಲ್ಲದಿದ್ದಾಗ ಅವನು ಪರಕೀಯನಾಗುತ್ತಾನೆ. ಅಂತಹ ವ್ಯಕ್ತಿಗೆ ಸಮಾಜ ಮತ್ತು ಅದರ ಸಂಸ್ಥೆಗಳು ತನ್ನ ವ್ಯಾಪ್ತಿಗೆ ಮೀರಿದವು, ತನ್ನ ಗ್ರಹಿಕೆಗೆ ಸಿಕ್ಕದಂತಹವು ಎನ್ನಿಸುತ್ತದೆ. ಅವುಗಳ ವ್ಯವಹಾರಗಳಲ್ಲಿ, ಆಗುಹೋಗುಗಳಲ್ಲಿ ಅವನು ಸಕ್ರಿಯವಾಗಿ ಭಾಗವಹಿಸಲಾರ. ತನ್ನಲ್ಲಿ ತಾನು ಪರಕೀಯನಾದವನು ತನ್ನತನವನ್ನು (Self-identity) ಕಳೆದುಕೊಳ್ಳುತ್ತಾನೆ. ಸಾಮಾಜಿಕವಾಗಿ ಪರಕೀಯನಾದವನಿಗೆ ಇಂತಹ ನಷ್ಟವೇನಿಲ್ಲವಾದರೂ ಭಾಗವಹಿಸುವಿಕೆ ಇಲ್ಲವಾಗುವುದರಿಂದ ಆ ಮೂಲಕ ಸಿಕ್ಕುವ ಸಮಾಜದ ಮೇಲಣ ಅಲ್ಪ ಸ್ವಲ್ಪ ಹಿಡಿತವೂ ಇಲ್ಲವಾಗುತ್ತದೆ. ತಾನು ಬೇರೆ. ಸಮಾಜ ಬೇರೆ ಎಂಬ ಭಾವವನ್ನು ಗೆಲ್ಲುವುದು ಅವನಿಗೆ ಸಾಧ್ಯವಾಗುವುದಿಲ್ಲ. ಸಮಾಜದಲ್ಲಿ ತಾನು ನಿರ್ವಹಿಸಬೇಕಾದ ಪಾತ್ರ ಇಲ್ಲದೆ, ಚಲಾಯಿಸಬಹುದಾದ ಹಕ್ಕಾಗಲಿ, ಗಳಿಸಬಹುದಾದ ಸ್ಥಾನವಾಗಲಿ ಅವನಿಗೆ ಪ್ರಾಪ್ತವಾಗುವುದಿಲ್ಲ. ತಾನೇ ಸಮಾಜವನ್ನು ದೂರ ಮಾಡಿದರೂ, ಸಮಾಜವೇ ತನ್ನನ್ನು ದೂರ ಮಾಡಿದೆ ಎಂದೇ ಅವನ ಅನಿಸಿಕೆ. ಅನ್ಯತೆಯನ್ನು ಗೆಲ್ಲಲಾರದ ಇವನ ಪರಿಸ್ಥಿತಿ ಸಮಾಜಕ್ಕೆ ಮೊದಲು ದೋಷವಾಗಿ, ಆಮೇಲೆ ಕಾಯಿಲೆಯಾಗಿ ಕಾಣಿಸುತ್ತದೆ. ವ್ಯಕ್ತಿಯ ಈ ನೆನೆಗುದಿಗೆ ತಾನೂ ಕೂಡ ಹೊಣೆ ಎಂದು ಸಮಾಜಕ್ಕೆ ಅನ್ನಿಸುವುದೇ ಇಲ್ಲ. ಹೀಗಾದಾಗ ವ್ಯಕ್ತಿ ವಾಸ್ತವದೊಂದಿಗೆ ಸಂಬಂಧವನ್ನು ಕಳೆದುಕೊಳ್ಳುತ್ತಾನೆ; ನಂತರ ವಾಸ್ತವಿ

ಕತೆಯನ್ನೇ ಪ್ರಶ್ನಿಸುತ್ತಾನೆ. ಅವನ ವೈಯಕ್ತಿಕ ಬದುಕು "ಬಹುಜನ ನಡೆವುದೆ ದಾರಿ ಯಿಂದ" ಬೇರ್ಪಟ್ಟು ಭಿನ್ನವಾಗುತ್ತದೆ. ಹೀಗೆ ವ್ಯಕ್ತಿಚೇತನದ ವೈಯಕ್ತಿಕ ಪಥವೂ ಸಾಮಾಜಿಕ ಪಥವೂ ಬೇರೆ ಬೇರೆ ಎಂದು ತೋರಿದರೂ ಪರಸ್ಪರ ಸಂಬಂಧಿಸಿದುವುಗಳಾಗಿವೆ; ಸಮಾಜದಿಂದ ವ್ಯಕ್ತಿಯ ನಿರ್ಮಾಣ ಮತ್ತು ವ್ಯಕ್ತಿಯಿಂದ ಸಮಾಜದ ನಿರ್ಮಾಣ ಹೀಗೆ ಇವೆರಡರಲ್ಲಿ ಪರಸ್ಪರ ಸಂಬಂಧವಿದೆ.

ವ್ಯಕ್ತಿ ತನ್ನ ವಿಶಿಷ್ಟವಾದ ಗುಣಸಮುದಾಯವನ್ನೊಳಗೊಂಡ ಆತ್ಮಾಭಿವ್ಯಕ್ತಿಯನ್ನು ನಿರಂತರವಾಗಿ ಅಂತಸ್ಫೂರ್ತಿಯಿಂದ ಕಾಪಾಡಿಕೊಂಡು ಬರಬೇಕೆಂದು ಸಮಾಜವು ನಿರೀಕ್ಷಿಸುತ್ತದೆ. ಹಾಗೆಯೇ ವ್ಯಕ್ತಿಯು ತಾನು ತನ್ನತನದ ಮಿತಿಗಳನ್ನು ಮೀರಿ ಸಮಾಜ ಜೀವನದಲ್ಲಿ ನೆಲೆಗೊಳ್ಳಲು, ಸಾಮಾಜಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಉಪಯುಕ್ತವಾಗಿಸಲು ತನ್ನ ಅಳಿಲು ಸೇವೆಯನ್ನು ಸಲ್ಲಿಸುವುದಕ್ಕೆ ಸಮಾಜವು ಅನುವುಮಾಡಿಕೊಡಬೇಕೆಂದು ನಿರೀಕ್ಷಿಸುತ್ತಾನೆ. ಸಮಾಜದಲ್ಲಿ ಬೆರೆಯುವುದರಿಂದ ವ್ಯಕ್ತಿ ತನ್ನ ವಿಶೇಷ "ವ್ಯಕ್ತಿತ್ವ" ವನ್ನೇನೂ ಕಳೆದುಕೊಳ್ಳುವುದಿಲ್ಲ; ತನ್ನ ಅಸ್ತಿತ್ವವನ್ನು ಭಾಗಶಃ ತೊಡಗಿಸಿ ಸಮಾಜದ ಮುನ್ನಡೆಗೆ ಕಾರಣನಾಗಬಯಸುತ್ತಾನೆ.

"ಉತ್ಪಾದನೆ" ಮಾಡುವ ವ್ಯವಸಾಯಗಾರ ಅಥವಾ ಕಾರ್ಖಾನೆ ಕಾರ್ಮಿಕ ತನ್ನಿಂದಾಗಿ ಜನಿಸುವ ಉತ್ಪನ್ನವಸ್ತುವಿಶೇಷದಿಂದಾಗಿ ವಿಶಿಷ್ಟನಾಗುತ್ತಾನೆಯಾದರೂ ಆ ವಸ್ತು ಅವನ ಕೈಯಿಂದ ಇನ್ನೊಬ್ಬನ ಕೈಗೆ ಸೇರಿದಮೇಲೆ ಆ ಕರ್ಮಿ ಅನ್ಯನಾಗುತ್ತಾನೆ, ಪರಕೀಯನಾಗುತ್ತಾನೆ. ಇದು ಹೇಗೆಂದು ಮೊಟ್ಟಮೊದಲು ಚಿಂತನೆ ನಡೆಸಿದವನು ಜರ್ಮನಿಯ ಕಾರ್ಲ್ ಮಾರ್ಕ್ಸ್. ಕಾರ್ಮಿಕನು ಪರಕೀಯನಾಗಲು ಕಾರಣ ಕರ್ಮವು ಯಾಂತ್ರಿಕವಾಗಿರುವುದೇ. ಅಡಿಕೆಯ ಗುಣಮಟ್ಟವು ಅದರ ಯಾರು ಯಜಮಾನರು, ಯಾರು ಬೇಸಾಯ ಮಾಡಿದ್ದು, ಯಾರು ಗೊನೆ ತೆಗೆದದ್ದು ಇತ್ಯಾದಿಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಕರ್ಮದಲ್ಲಿ ಕಾರ್ಮಿಕನಿಂದ ಹೊರತಾಗಿರುವ ಕಾರ್ಮಿಕನ ಸೃಷ್ಟಿಕ್ರಿಯೆಗೆ ಮತ್ತು ಕಲೆಗೆ ಅವಕಾಶವೆಲ್ಲಿ? ಆದ್ದರಿಂದಲೇ ಉತ್ಪನ್ನ ವಸ್ತುವಿನೆದುರು, ಅದರ ವಾಣಿಜ್ಯ ಮೌಲ್ಯನೆದುರು, ಆದನ್ನು ಉತ್ಪತ್ತಿಮಾಡಿದ ಕಾರ್ಮಿಕ ಪರಕೀಯನಾಗುತ್ತಾನೆ.

ಅಷ್ಟೇ ಅಲ್ಲ, ಅವನು ಅವನಾಗಿರುವಾಗ ಕೆಲಸ ಮಾಡಲಾರ, ಕೆಲಸ ಮಾಡುವ ಅವನು ಅವನಾಗಿರಲಾರ; ಆದ್ದರಿಂದ ಸಮಾಜದಲ್ಲಿ ಪರಕೀಯನಾಗಿರುವುದರ ಜೊತೆಗೆ ತನ್ನೊಳಗೂ ತಾನು ಅನ್ಯನಾಗುತ್ತಾನೆ. ಮಾಡಲೇಬೇಕಾಗಿ ಬಂದ, ಅಥವಾ ಹೇರಲ್ಪಟ್ಟ ಕರ್ಮದಲ್ಲಿ ಸ್ವಾತಂತ್ರ್ಯ, ಸಂತೋಷ ಸೃಜನಶೀಲತೆ

ಸಾಧ್ಯವೇ? ಹೀಗಾದಾಗ ಆ ಕರ್ಮವು ಅವಶ್ಯಕತೆಗಳ ಪೂರೈಕೆಗಳ ಸಾಧನವಾಗುತ್ತದೆಯೇ ಹೊರತು ಅದೇ ಅವಶ್ಯಕಕರ್ಮವಾಗುವುದಿಲ್ಲ.

ಕರ್ಮ ಮತ್ತು ಕಾರ್ಮಿಕರ ನಡುವಣ ಈ ಸಂಬಂಧದ ವಿಕ್ಷಿಪ್ತತೆಗೆ ವಾಣಿಜ್ಯ ಕ್ಷೇತ್ರದ ಆರ್ಥಿಕ ಕಬಂಧಬಾಹುವನ್ನೂ ಸೇರಿಸಬೇಕು. ಇಲ್ಲಿ ಕರ್ಮವು ಮಾನವನ ಅಭಿವ್ಯಕ್ತಿಯಾಗುವುದರ ಬದಲು ಮಾರಾಟದ ಸರಕಾಗುತ್ತದೆ, ಬದುಕಿ ಉಳಿಯುವ ಹೋರಾಟದ ಏಕೈಕ ಉಪಾಯವಾಗುತ್ತದೆ. ಈ ಗುರಾಣಿಯು ಹಿಂದಿರುವ ವ್ಯಕ್ತಿಯು ಪ್ರಕಾಶಕ್ಕೆ ಬರಲಾಗುವುದೇ ಇಲ್ಲ. ಹೀಗೆ ಪರಕೀಯತೆಗೆ ಕಾರಣಗಳೆಂದರೆ (೧) ಕರ್ಮವು ಕರ್ಮಿಯಿಂದ ಬೇರ್ಪಡುವುದು; (೨ ಕರ್ಮವು ಮಾರಾಟದ ಸರಕಾಗುವುದು; ೩) ಕರ್ಮಿಯು ತನ್ನದೇ ಕರ್ಮಕ್ಕೆ ದಾಸನಾಗುವುದು ಮತ್ತು ೪) ಆರ್ಥಿಕ ಪ್ರಾಮುಖ್ಯವು ಕಲೆಯನ್ನೂ, ಸೃಜನಶೀಲತೆಯನ್ನೂ ದೂರಮಾಡುವುದು. ವಂಚಕನೊಬ್ಬನು ಹಣದ ಪ್ರಭಾವದಿಂದ ಪ್ರಾಮಾಣಿಕ ಸಮಾಜಸೇವಕನೆನ್ನಿಸಿಕೊಳ್ಳಬಹುದಾದರೆ ಪ್ರಾಮಾಣಿಕ ಪರೋಪಕಾರಿಗೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲ. "ಛೇ, ಪಾಪದವ" ಎನ್ನುತ್ತಲೇ ಸಮಾಜ ಅವನನ್ನು ಇನ್ನಷ್ಟು ಶೋಷಿಸುತ್ತದೆ.

ಮಾರಾಟಕ್ಕಿರುವ ಕುಶಲಕರ್ಮದ ಬೆಲೆ ಕೌಶಲ್ಯ, ಕಲೆಗಳನ್ನಾಧರಿಸುವುದರ ಬದಲು ಕುಶಲ ಕರ್ಮಿಗಳ ಸಂಖ್ಯೆಯ ಮೇಲೆ ನಿರ್ಧಾರಿತವಾಗುತ್ತದೆ. ಹೆಚ್ಚು ಕರ್ಮಿಗಳು ಲಭ್ಯವಾದಂತೆ ಕರ್ಮದ ಬೆಲೆ ಇಳಿಯುತ್ತದೆ. ಇದೇ ಶೋಷಣೆಯ ಮೂಲ. ಇದರಿಂದ ಕರ್ಮಿ ಬಡವನಾಗುತ್ತ ಹೋಗುತ್ತಾನೆ; ಅವನ ಕೆಲಸವನ್ನು ಕೊಳ್ಳುವವ ಶ್ರೀಮಂತನಾಗುತ್ತ ಹೋಗುತ್ತಾನೆ. ಕೆಲಸದ ಅವಧಿ, ಉತ್ಪನ್ನದ ಪ್ರಮಾಣ ಇಂಥವೇ ನಿರ್ಣಾಯಕವಾಗುತ್ತವೆ. ಬದುಕಿನ ಅವಶ್ಯಕತೆಗಳಿಗಾಗಿ ಕರ್ಮಕೌಶಲ್ಯವನ್ನು ಮಾರಬೇಕಾಗಿ ಬಂದವನಿಗೆ ಸಾಮಾಜಿಕ ಶ್ರೇಷ್ಠತೆಗಳೂ ಇಲ್ಲ; ತನ್ನೊಳಗೂ ತನಗೆ ಈ ಭಾವನೆಗಳು ಸಾಧ್ಯವಾಗದೆ ಅತೃಪ್ತನಾಗಬೇಕಾಗುತ್ತದೆ. ಮಾರ್ಕ್ಸ್ ಪ್ರಕಾರ ಪರಕೀಯತೆಗೆ ಮುಖ್ಯ ಕಾರಣವೆಂದರೆ ಸಮಾಜವು ವ್ಯಕ್ತಿಗೆ ಅವನ ಕರ್ಮಕ್ಕೆ ಅನುಸಾರವಾಗಿ ಕೊಡುವ ಸ್ಥಾನದಲ್ಲಿ ಅವನು ಇರಬೇಕಾಗುವುದು ಮತ್ತು ಅಂತಹ ಸ್ಥಾನಕ್ಕೆ ಸಮಾಜವು ನಿರ್ದೇಶಿಸುವ ನೀತಿವಂತಿಕೆಯನ್ನು ಒಪ್ಪಿಕೊಳ್ಳಬೇಕಾಗಿ ಬರುವುದು. ಉದಾಹರಣೆಗೆ, ಸಾಮಾನ್ಯವಾಗಿ ನಿರೀಕ್ಷಿಸಬಹುದಾದಂತೆ ಕಾರ್ಖಾನೆ ಕಾರ್ಮಿಕರು ಕುಡುಕರಾಗಿರುತ್ತಾರೆ. ಅಭಿಯಂತ, ಆರಕ್ಷಕ, ಅರಣ್ಯ ರಕ್ಷಕ ಇತ್ಯಾದಿ ಜನ ಲಂಚಕೋರರಾಗಿರುತ್ತಾರೆ ಮತ್ತು ಉಪಾಧ್ಯಾಯ ದುರ್ವ್ಯಸನಗಳಿಲ್ಲದೆ ಶೀಲವಂತನಾಗಿರುತ್ತಾನೆ ಇತ್ಯಾದಿ. ಸೂಕ್ಷ್ಮಸಂವೇದಿಯೊಬ್ಬ ಕಾರ್ಖಾನೆ ಕಾರ್ಮಿಕನಾದರೆ, ಶೀಲವಂತ ಆದರ್ಶವ್ಯಕ್ತಿ ಮರಾಮತ್ತು ಇಲಾಖೆಯಲ್ಲಿದ್ದರೆ, ಭ್ರಷ್ಟ ದುರ್ವ್ಯಸನಿ ಉಪಾಧ್ಯಾಯ ವೃತ್ತಿ

ಯಲ್ಲಿದ್ದರೆ? ಸಮಾಜದ ನಿರೀಕ್ಷೆಯಂತೆ ಇರಲಾಗದೆ ತನಗೆ ತಾನು ಪರಕೀಯ ನಾಗಬೇಕಾಗುತ್ತದೆ.

ಸಮಾಜವು ವ್ಯಕ್ತಿಯನ್ನು ಉದ್ದೇಶಸಾಧನೆಯ ಮಾಧ್ಯಮವನ್ನಾಗಿ, ಅಷ್ಟೇ ಏಕೆ, ಸಾಮಾಜಿಕ ಸಂಸ್ಥೆಗಳ ತೀರ್ಮಾನವನ್ನು ಜಾರಿಗೆ ತರುವ ಮಾಧ್ಯಮ ವನ್ನಾಗಿ, ಬಳಸಿಕೊಂಡಾಗ ವ್ಯಕ್ತಿ ಪರಕೀಯನಾಗಬೇಕಾಗುತ್ತದೆಯೇನೋ ಸರಿ. ಆದರೆ ವ್ಯಕ್ತಿ ಸಂಪೂರ್ಣವಾಗಿ ಈ ಮಾಧ್ಯಮದಲ್ಲಿ ಐಕ್ಯವಾಗಬೇಕಾದ ಅಗತ್ಯ ವೇನಿಲ್ಲ. ಸಮಾಜದ ತಾಳಕ್ಕೆ ಸಂಪೂರ್ಣವಾಗಿ ಕುಣಿಯುವ ವ್ಯಕ್ತಿ ಇರಲು ಅಸಾಧ್ಯ. ವ್ಯಕ್ತಿಯ ಅಂತಃಸ್ಫುರಣ ಯಾವುದೇ ಸಾಮಾಜಿಕ ಸಂಸ್ಥೆಯ ಆಗು ಹೋಗುಗಳಿಂದ ಮುಳುಗಲೂ ಆರದು, ಬೆಳಗಲೂ ಆರದು. ಇಡಿಯ ಚೇತನ ಅಂತಃಸ್ಫೂರ್ತಿಯಿಂದಲೇ ತುಂಬಿಹೋಗುವುದೂ ಅಸಾಧ್ಯ. ಮಾತಿನ ಮೂಲಕ ವಾಗಲಿ, ಬರಹದ ಮೂಲಕವಾಗಲಿ ಅವನು ತನ್ನ ಅಂತಃಸ್ಫೂರ್ತಿಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲಾರ. ಭಾಷೆ ಅಲ್ಪ ಸ್ವಲ್ಪ ಅವನದ್ದೇ. ವಿಶೇಷ ವನ್ನು ಸಂವಹಿಸಬಹುದಾದರೂ, ಭಾಷೆಯೂ ಅವನಿಗೆ ಎರವಲು ಬಂದದ್ದೇ ಆದ್ದರಿಂದ ವ್ಯಕ್ತಿ ಭಾಷೆಯಿಂದಲೂ ಅನ್ಯನಾಗುತ್ತಾನೆ. ತನ್ನನ್ನು ತಾನು ಅಭಿವ್ಯಕ್ತಿಗೊಳಿಸಲು ಇರುವ ಏಕೈಕ ಉಪಕರಣವೂ ಅವನದ್ದಲ್ಲ! ಸಮಾಜದ ಪರಿಷ್ಕಾರವೂ ವ್ಯಕ್ತಿಯ ಅಂತಃಸ್ಫುರಣವೂ ಒಂದಾಗುವುದು ಸಾಧ್ಯವೂ ಅಲ್ಲ, ಮಾನವೀಯ ಸೃಜನಶೀಲತೆಯ ದೃಷ್ಟಿಯಿಂದ ಅದು ಅಪೇಕ್ಷಣೀಯವೂ ಅಲ್ಲ. ವೈಯಕ್ತಿಕತೆ ಎಲ್ಲಿ ಇರುವುದಿಲ್ಲವೋ ಅಲ್ಲಿ ಪರಕೀಯತೆ ಇರುತ್ತದೆ.

ಶೋಷಿತ ವ್ಯಕ್ತಿಯ ಪರಕೀಯತೆ ಅಸಹಾಯಕತೆಗಳು ಕೆಡುಕುಗಳಾದರೂ, ಸಮಾಜರಚನೆ ಮತ್ತು ಸಂಸ್ಥೆಗಳ ಸ್ಥಾಪನೆಯಲ್ಲಿ ಪಾತ್ರವಹಿಸುವ ವ್ಯಕ್ತಿಗಳ ಪರಕೀಯತೆ (ಒಳ್ಳೆಯದಲ್ಲದಿದ್ದರೂ) ಕೆಡುಕಂತೂ ಅಲ್ಲ. ಸಂಸ್ಥೆಗಳಿಗಾಗಿ ದುಡಿಯುವುದು, ದಾನಮಾಡುವುದು ಇತ್ಯಾದಿಗಳೂ ಭಾಷೆ ಹೇಗೋ ಹಾಗೆ ವ್ಯಕ್ತಿಯ ಅಂತಃಸ್ಫುರಣದ ಅಭಿವ್ಯಕ್ತಿಗಳೇ. ಸಮಾಜಕ್ಕಾಗಿ ಅರಳಿಕೊಂಡವನ ಪರಕೀಯತೆ ಅವನ ಅಹಂಕಾರವನ್ನು ಕಡಿಮೆಮಾಡಿ, ತ್ಯಾಗೀಶ್ವರನ ಪಟ್ಟಕಟ್ಟಿ ಧನ್ಯತೆಯನ್ನುಂಟುಮಾಡುವುದರಿಂದ ಅದು ಅವನಿಗೆ ಮನೋರೋಗವಾಗಿ ಪರಿಣಮಿಸುವುದಿಲ್ಲ. ಬದಲಿಗೆ ಅಂತಃಸ್ಫುರಣದ ಆಸ್ಫೋಟನೆಗೆ ಒಂದು ಅರ್ಥ, ಒಂದು ಗುರಿ, ಒಂದು ಪ್ರಯೋಜಕ ದೃಷ್ಟಿ ಇವುಗಳನ್ನು ಕೊಡುತ್ತದೆ. ಸಂಸ್ಥೆ, ಸಮಾಜ, ರಾಜ್ಯ, ದೇಶ ಇತ್ಯಾದಿ ಒಕ್ಕೂಟಗಳೆಲ್ಲ ಮಾನವನಿರ್ಮಿತಗಳೆ, ಮಾನವನ ರೂಪರಹಿತ ಅಂತಃಸ್ಫುರಣದ ಸಾಕಾರಗಳೆ. ತಮ್ಮನ್ನು ಸೃಜಿಸಿದ ಎಲ್ಲ ವ್ಯಕ್ತಿ ಗಳನ್ನೂ ಮೀರಿ ನಿಂತ ಈ ಸಾಕಾರಗಳು ಮುಂಬರುವ ಸಮಾಜಕ್ಕೆ, ವ್ಯಕ್ತಿಗಳಿಗೆ ಸಂಪ್ರದಾಯದ, ನಡತೆಯ, ಧೋರಣೆಯ ಮೇಲ್ಪಂಕ್ತಿಗಳನ್ನು ಹಾಕಿಕೊಡುತ್ತವೆ.

ವ್ಯಕ್ತಿಗಳು ತಮ್ಮದೇ ಮಿತಿಗಳನ್ನರಿತುಕೊಂಡು ಅವುಗಳಿಂದ ಹೊರಬರುವ ಹಾಗೂ ಇತರರನ್ನು ಪರಿಗಣಿಸುವ ಪ್ರಕ್ರಿಯೆಗೆ ಅವು ಸೂಕ್ತ ಭೂಮಿಕೆಯ ನ್ನೊದಗಿಸುತ್ತವೆ. ವ್ಯಕ್ತಿಯ ಪ್ರಕಾಶವನ್ನು ಅವನ ಮೇಲೇ ಪ್ರತಿಫಲಿಸುವ ಕನ್ನಡಿಗಳಿವು: ಆದರೆ ಈ ಕನ್ನಡಿಗಳನ್ನು ನಿರ್ಮಿಸುವುದೂ ವ್ಯಕ್ತಿಯ ಅಂತಃ ಸ್ಫುರಣವೇ. ಭಾಷೆ, ಕಾವ್ಯ, ರಾಜ್ಯಾಂಗ, ಕಾನೂನು, ಕಲೆ, ವಿಜ್ಞಾನ ಎಲ್ಲವೂ ಮಾನವನ ಅಂತಃಸ್ಫೂರ್ತಿಜನ್ಯವೇ ಆದರೂ ನಮಗೆ ಅವು ಕರತಲಾಮಲಕ ವಾಗುವ ತನಕ ಪರಕೀಯವೆ. ಮುದ್ದಣ, ಪೆಕಾಲೆ, ಮ್ಯಾಕ್ಸ್‌ಮುಲ್ಲರ್, ಮಹಾತ್ಮಾಗಾಂಧಿ, ಐನ್‌ಸ್ಟೈನ್ ಎಲ್ಲರಿಗೂ ಅಂತಃಸ್ಫುರಣದ ಅಭಿವ್ಯಕ್ತಿಗೆ ಮೂಲಶಿಕ್ಷಣ ಮತ್ತು ಶಿಷ್ಟ ಸಂಪ್ರದಾಯಗಳೇ ತಳಹದಿಯಾಗಿದ್ದುವು ತಾನೆ? ಅಂತಹ ತಳಹದಿಯ ಮೇಲೆ ನಿಲ್ಲದ ದಿಢೀರ್ ಅಂತಃಸ್ಫುರಣಕ್ಕೆ ಮೂಲಭೂತ ಬೆಲೆಯೇ ಇಲ್ಲವಾಗುತ್ತದೆ. ಸಮಾಜದ ರಚನೆಗಳು ವ್ಯಕ್ತಿಗೆ ಪರಕೀಯ ವಾದರೂ, ಅವು ಇತ್ಯಾತ್ಮಕ ಅಭಿವ್ಯಕ್ತಿಗಳು ಮತ್ತು ಅರ್ಥವತ್ತಾದ ಉತ್ಪಾದನೆ ಗಳು ಎಂಬುದನ್ನು ಅಲ್ಲಗಳೆಯಲಾಗದು – ಇನ್ನೊಂದು ಅರ್ಥದಲ್ಲಿ ಅವು ಸ್ವತಂತ್ರ ಮಾನವನ ವಿಕ್ಷಿಪ್ತತೆಗಳಾಗಿದ್ದರೂ ಸಹ.

ಪರಕೀಯವೆನಿಸುವ ಸಂಗತಿಗಳ ಬಗ್ಗೆ ವಿರೋಧ ಸಹಜವೇ. ಕಳ್ಳತನಕ್ಕೆ ಹೊರಡುವವನು ಚಂದ್ರನನ್ನು ದ್ವೇಷಿಸಿದರೂ, ಅದರ ಅಪ್ರಯೋಜಕತೆಯನ್ನ ರಿತು ಚಂದ್ರನಿಲ್ಲದ ದಿನಗಳನ್ನೇ ಆರಿಸಿಕೊಳ್ಳುವಂತೆ, ಯಾವುದರೆದುರು ನಾವು ಏನೂ ಮಾಡಲಾರೆವೋ ಆ ಪ್ರಕೃತಿಯ ಸಂಗತಿ ಸನ್ನಿವೇಶಗಳಿಗೆ ಹೊಂದಿ ಕೊಳ್ಳುತ್ತೇವೆ. ಆದರೆ ಮಾನವನಿರ್ಮಿತ ರಚನೆಗಳು ಅತಿರಿಕ್ತವಾಗಿ ಪರಿಣಮಿಸಿ ಅನ್ಯವಾದಾಗ ಅವುಗಳನ್ನು ವಿರೋಧಿಸುವದರಲ್ಲಿ ತಪ್ಪೇನಿಲ್ಲ. ಉದಾಹರಣೆಗೆ, ಪ್ರಜಾಪ್ರಭುತ್ವದ ಛತ್ರದಡಿ ಸರ್ವಾಧಿಕಾರ ನಾವೇ ಆರಿಸಿದ ಪ್ರತಿನಿಧಿಗಳು ನಮಗೇ ಅತಿರಿಕ್ತರಾಗಿ ಪರಕೀಯರಾಗುವುದು. ಸಮಾಜದ ವಿರೋಧ ಆಗ ಸ್ವಾಗತಾರ್ಹ! ಬಹುಜನರನ್ನು ಅನ್ಯರನ್ನಾಗಿಸಿ, ಅವರು ಒಪ್ಪಿರುವ ರಾಜ್ಯಾಂಗ ವನ್ನು ಅಪಮಾರ್ಗಕ್ಕೆಳೆಸುವ ಅಂಥ ವೈಯಕ್ತಿಕ ಅತಿರಿಕ್ತವನ್ನು ವಿರೋಧಿಸು ವುದು ಕರ್ತವ್ಯವೇ ಹೌದು; ರಾಜ್ಯಾಂಗವನ್ನು ಕಟ್ಟುವಷ್ಟೇ ರಚನಾತ್ಮಕವೂ ಹೌದು.

ಹೀಗೆ ಇತರರು ನಮ್ಮನ್ನು ಪರಕೀಯರನ್ನಾಗಿಸಲು ಅವಕಾಶವಿಲ್ಲದಂತೆ ನಾವೇ ನಮ್ಮ ಅನ್ಯತೆ ವೈಯಕ್ತಿಕತೆಗಳನ್ನು ಸಾಮಾಜಿಕ ರಚನೆಯ ಚೌಕಟ್ಟಿ ನೊಳಗೇ ಕಾಯ್ದುಕೊಳ್ಳಬೇಕಾಗುತ್ತದೆ. ಅಂತೆಯೇ ಅಂತರಂಗವು ಅಪಮಾರ್ಗ ಹಿಡಿಯದಂತೆ ಅಂತಃಸ್ಫುರಣವನ್ನೂ ಸಹ. ಸಂಘಸಂಸ್ಥೆಗಳಿಗೆ ಅವನ್ನು ನಡೆ ಸುವ ಪದಾಧಿಕಾರಿಗಳಿಗಿಂತ ಭಿನ್ನವಾದ ವ್ಯಕ್ತಿತ್ವ ಇರಲಾರದು. "ಸಂಘೇ

ಶಕ್ತಿಃ ಕಲೌ ಯುಗೇ" ಎಂಬುದನ್ನನುಸರಿಸಿ ಆ ಸಂಘದ ಬಲವನ್ನು ಬಳಸಿಕೊಂಡು ಅವರು ಇತರರಿಗಿಂತ ಹೆಚ್ಚು ಕ್ರೂರ ಶೋಷಕರಾಗುವ ಸಾಧ್ಯತೆಯಿದೆ: ಉದಾಹರಣೆಗಳು ಬೇಕಾದಷ್ಟಿವೆ. ಸಾಮಾನ್ಯವಾಗಿ ಜನರನ್ನು (ಅಪರೂಪವಾಗಿ ಇಡಿಯ ಸಂಘವನ್ನೇ ಸಮಾಜದಲ್ಲಿ) ಪರಕೀಯಗೊಳಿಸುವ ಇಂಥವರನ್ನು ನಿಯಂತ್ರಿಸುವುದು ಯಾರೊಬ್ಬರಿಗೂ ಕಷ್ಟವೇ. ಇವರಿಂದಾಗಿ ಸಂಘಕ್ಕೂ ಸಮಾಜಕ್ಕೂ ನಡುವಣ ಬಿರುಕು ದಿನದಿನಕ್ಕೂ ದೊಡ್ಡದಾಗುತ್ತ ಹೋಗುತ್ತದೆ. ಇವರಿಂದಾಗಿ ಸಂಘಕ್ಕೆ ಆರೋಪಿಸಲ್ಪಡುವ ಈ ಕಾಠಿಣ್ಯವನ್ನು ನಾವು ವಿರೋಧಿಸಬೇಕೇ ಹೊರತು ಸಂಘದ ರಚನೆಯನ್ನೇ ಅಲ್ಲ. ವ್ಯಕ್ತಿಗೂ ಸಂಘಕ್ಕೂ ನಡುವೆ ಇರುವ ಸಹಜ ಪರಕೀಯತೆಯನ್ನು ಹೆಚ್ಚಿಸುವುದು ಈ ಕಾಠಿಣ್ಯ.

ಕೊನೆಯದಾಗಿ, ಈ ಪರಕೀಯತೆಯು ವ್ಯಕ್ತಿಯ ಭಾವ ಪರವಶತೆಯ ಒಂದು ರೂಪಾಂತರವೂ ಆಗಿರುವುದು ಸಾಧ್ಯ. ತನ್ನ ಸಹಜ ಮಿತಿಯನ್ನು ಮೀರಿ ಹೋಗುವ ವ್ಯಕ್ತಿಗೆ ಇಂಥ ಸ್ಥಿತಿ ಪ್ರಾಪ್ತವಾಗಬಹುದು. ಭೌತಾತೀತ ದೃಷ್ಟಿಯಲ್ಲಿ ಇಂಥ ಪರಕೀಯತೆಯು ಪ್ರಾಪಂಚಿಕತೆಯಿಂದ ಬೇರ್ಪಟ್ಟು ದೈವ ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಲಕ್ಷಣವೂ ಆಗಿರಬಹುದು. ಅಥವಾ ಲೌಕಿಕ ದೃಷ್ಟಿಯಲ್ಲಿ ಇದು ವ್ಯಕ್ತಿಗೆ ತನ್ನ ನಂಬಿಕೆಗಳ ಮೇಲಣ, ತಾನು ಕಟ್ಟಿ ಬೆಳೆಸಿದ ಅಥವಾ ಸೇರಿ ಒಂದಾಗಿರುವ ಸಂಘದ ಮೇಲಣ ಭಾವತೀವ್ರತೆ ಅಥವಾ ಭಾವಾವೇಶವೂ ಆಗಿರಬಹುದು. ಅದ್ವೈತದೃಷ್ಟಿಯಲ್ಲಿ ಅದು ತನ್ನ ಅಂತರಾತ್ಮದೊಂದಿಗೆ ಏಕೀಭವಿಸುವುದರಿಂದ ಉಂಟಾಗಿರಬಹುದು. ಭಕ್ತಿಭಾವದ ದೃಷ್ಟಿಯಲ್ಲಿ ಅದು ಅತೀತವಾದೊಂದು ವಿಶ್ವಚೈತನ್ಯದೊಂದಿಗೆ ಐಕ್ಯಹೊಂದಿದ್ದರಿಂದ ಉಂಟಾಗಿರಬಹುದು; ಇತ್ಯಾದಿ. ಸಂಕುಚಿತ ಸಾಮಾಜಿಕ ದೃಷ್ಟಿಯಿಂದ ಇದನ್ನು ಪರಕೀಯತೆ ಎಂದು ಪರಿಗಣಿಸ ಬಹುದಾದರೂ ವ್ಯಕ್ತಿಯ ದೃಷ್ಟಿಯಿಂದ ಹಾಗೆ ಹೇಳುವಂತಿಲ್ಲ. ಏಕೆಂದರೆ ಇಲ್ಲಿ ವ್ಯಕ್ತಿಗೆ ಪರಕೀಯ ಪ್ರಜ್ಞೆ ಇರುವುದಿಲ್ಲ. ಇಂತಹ ಭಾವನಾತ್ಮಕ ಪರಕೀಯತೆಯನ್ನು ಸಾಮಾಜಿಕ ಪರಿಸ್ಥಿತಿಯಲ್ಲಿ ಅನ್ವಯಿಸಲು ಬರುವುದಿಲ್ಲ – ಏಕೆಂದರೆ ಯಾವುದೇ ಸಾಮಾಜಿಕ ರಚನೆಯ ವ್ಯಕ್ತಿಸಮುದಾಯವು ಇಂಥದೊಂದು ಐಕ್ಯವನ್ನು ಹೊಂದುವುದು ಅಸಾಧ್ಯ. ★

('ವಿವೇಕ ಪ್ರಭ' ದ ಸಾಭಾರ)

ಕಳ್ಳತನಕ್ಕಾಗಿಯೇ ಹುಟ್ಟಿದ್ದು!

(ಸುಂದರ ಬನ್ಸ್ ಪರಿಸರದ ಕಥೆ ಮತ್ತು ವ್ಯಥೆ)

ಓರ್ವ ಸುಪ್ರಸಿದ್ಧ ಜರ್ಮನ್ ತತ್ವಜ್ಞಾನಿಯು ಒಮ್ಮೆ ಹೀಗೆ ಹೇಳಿದ, **"ಬಡತನ ಒಂದು ಕಳ್ಳತನ"**. ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದ ಆಧುನಿಕ ಕಾನೂನೂಗಳನ್ನು ಗಮನಿಸಿದಾಗ ಈ ಅಭಿಪ್ರಾಯವು ತುಸು ಆಶ್ಚರ್ಯಕರವೆಂದೆನಿಸುತ್ತದೆ. ಆದರೆ ವಿಚಿತ್ರ ಸಂಗತಿ ಏನೆಂದರೆ ಬಂಗಾಳರಾಜ್ಯದಲ್ಲಿಯ ರಾಷ್ಟ್ರೀಯ ಉದ್ಯಾನವನವಾದ 'ಸುಂದರಬನ್ಸ್'ನ ಸ್ಥಳೀಯ ಆಡಳಿತವು ಜರ್ಮನ್ ತತ್ವಜ್ಞಾನಿಯ ಈ ಅಭಿಪ್ರಾಯವನ್ನು ಪುಷ್ಟೀಕರಿಸುವಂತೆ ಕಾಣುತ್ತಿದೆ. ಸ್ಥಳೀಯ ಜನರು ಯಾವ ಸ್ಥಳೀಯ ಯುವಕರನ್ನು ಸಮಾಜ ಘಾತುಕರೆಂದು ಕರೆಯುತ್ತಿದ್ದಾರೋ ಅವರು ತಮ್ಮ ಕಳ್ಳತನದ ಉದ್ಯೋಗವನ್ನು ಕಾನೂನು ರಕ್ಷಕರಿಂದ ಯಾವುದೇ ವಿರೋಧವಿಲ್ಲದೆ ರಾಜಾರೋಷವಾಗಿ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಏಕೆಂದರೆ ವಲಸೆ ಬರುತ್ತಿರುವ ಜನರ ಕಾರಣದಿಂದಾಗಿ ಮತ್ತು ಜನಸಂಖ್ಯೆಯ ಹೆಚ್ಚಳದಿಂದಾಗಿ ಆದಾಯದ ಸಂಪನ್ಮೂಲಗಳು ಇಲ್ಲದಂತಾಗುತ್ತಿರುವಾಗ ಸ್ಥಳೀಯ ಯುವಕರು ತಮ್ಮ ಬದುಕಿನ ನಿರ್ವಹಣೆಗಾಗಿ ಬೇರೆ ಏನುತಾನೇ ಮಾಡಬಲ್ಲರು?

೧೯೮೪ರಲ್ಲಿ ಭಾರತ ಸರ್ಕಾರವು ಸುಂದರ್‌ಬನ್ಸ್ ಒಂದು ರಾಷ್ಟ್ರೀಯ ವನವೆಂದು ಘೋಷಿಸಿತು. ಇದು ಪ್ರಪಂಚದಲ್ಲಿಯೆ ಅತ್ಯಂತ ವಿಶಾಲವಾದ ಮ್ಯಾನ್‌ಗ್ರೋವ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಮೊದಲು ಇದ್ದ ಮ್ಯಾನ್ ಗ್ರೋವ್ ಪ್ರದೇಶವನ್ನು ಪುನರ್ ವಶೀಕರಿಸಿಕೊಳ್ಳಲಾಯಿತು ಮತ್ತು ಈಗ ಸುಂದರ್ ಬನ್ಸ್‌ನ ಮ್ಯಾನ್‌ಗ್ರೋವ್ ಕಾಡಿನ ಒಟ್ಟು ವಿಸ್ತಾರ ೪೨೦೦ ಚದುರ ಕಿ.ಲೋ. ಮೀಟರ್ ಇದೆ. ಈ ಪ್ರದೇಶವು ಭಾರತ ಮತ್ತು ಬಾಂಗ್ಲಾದೇಶ ಎರಡು ದೇಶಗಳಲ್ಲಿಯೂ ಚಾಚಿದೆ. ಭಾರತದಲ್ಲಿ ಪುನರ್ ವಶೀಕರಿಸಿಕೊಳ್ಳಲಾದ ಭೂಪ್ರದೇಶದ ಕ್ಷೇತ್ರಫಲ ೫[illegible]೦೦ ಚದುರ ಕಿ.ಲೋ. ಮೀಟರ್ ಇದೆ. ಇದು ವಿಶ್ವದ ವಿಖ್ಯಾತ ವನ. ವಿಶ್ವದ ಅತ್ಯಂತ ವಿಶಾಲವಾದ ಪರಿಸರ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಪ್ರಸಿದ್ಧ ರಾಯಲ್ ಬೆಂಗಾಲ್ ಹುಲಿಗಳ ತಾಣವಾಗಿದೆ. ಹಾರುವ ಮೀನುಗಳು, ಉಪ್ಪು ನೀರಿನ ಮೊಸಳೆಗಳು, ಸಾಲ್ವೇಡಾರ್ ಹೆಂಟೆಗೊದ್ದಗಳು, ನಳ್ಳಿಗಳು ಮತ್ತು ಆಮೆಗಳು ಮುಂತಾದ ಜಲಚರಗಳಿಗೆ ತಾಣವೆಂದೂ ಪ್ರಸಿದ್ಧವಾಗಿರುವ ಸುಂದರಬನ್ಸ್‌ನ್ನು ಪ್ರವಾಸಿಗರ ಆಕರ್ಷಕ ಕ್ಷೇತ್ರವನ್ನಾಗಿ ಹಾಗೂ ತನ್ಮೂಲಕ ಆ ಪ್ರದೇಶದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕೆಲಸ ಇನ್ನೂ ಬಹಳಷ್ಟು

ಇದೆ. ಇಡೀ ಪ್ರದೇಶವೇ ಕಡು ಬಡತನ ಮತ್ತು ಅತಿ ಹಸಿವಿನಿಂದ ಕಂಗಾಲಾಗಿದೆ. ಪ್ರವಾಸಿಗರಿಗೆ ಚಿರತೆಗಳು, ಹೆಣ್ಣು ಹುಲಿಗಳು ಮತ್ತು ಮನುಷ್ಯರನ್ನು ರನ್ನು ಬೇಟೆಯಾಡುವ ಬೆಂಗಾಲ್ ಹುಲಿಗಳು ಆಕರ್ಷಣೆಯ ಮುಖ್ಯ ಮೂಲಗಳಾಗಿವೆ. ೭೦ರ ಪ್ರಾರಂಭಿಕ ದಶಕಗಳಲ್ಲಿ ರಾಯಲ್ ಬೆಂಗಾಲ್ ಹುಲಿಗಳ ಸಂಖ್ಯೆ ಸುಮಾರು ೧೫೦ ಮಾತ್ರ ಇತ್ತು. ೧೦ ವರ್ಷಗಳ ನಂತರ ಆ ಸಂಖ್ಯೆಯು ೨೬೪ಕ್ಕೆ ಏರಿತು. ಹೊರಗಿನವರಿಗೆ ಆ ಪ್ರದೇಶವು ವಿಶಿಷ್ಟವಾದ ವನ್ಯ ಜೀವಿಗಳ ಒಂದು ಸಂಗ್ರಹವಾಗಿಯೂ ಮತ್ತು ಪ್ರಕೃತಿ ಪ್ರೇಮಿಗಳಿಗೆ ಒಂದು ಗಣಿಯಾಗಿಯೂ ತೋರುತ್ತದೆ. ಆದರೆ ಆ ಪ್ರದೇಶದ ಒಳಗಿರುವ ಜನರಿಗೆ ಆ ಇಡೀ ಪ್ರದೇಶವು ಬಡತನದಿಂದ ತೊಳಲುತ್ತಿದೆ ಮತ್ತು ಆದಾಯದ ಯಾವ ಮೂಲಗಳೇ ಇಲ್ಲದಂಥ ಪ್ರದೇಶವಾಗಿದೆ. ಇದರ ಪರಿಣಾಮವಾಗಿ ಬಹಳಷ್ಟು ಯುವಕರು ತಮ್ಮ ಜೀವನ ನಿರ್ವಹಣೆಗಾಗಿ ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ವರ್ಷದಲ್ಲಿ ಒಂದು ಬೆಳೆಯನ್ನು ಮಾತ್ರ ಬೆಳೆಯಬಹುದಾದ ಪುನರ್‌ವಶೀಕೃತ ಸುಂದರ್‌ಬನ್ಸ್ ಭೂಮಿಯು ಸ್ಥಳೀಯ ಜನರ ಜೀವನದ ಅಗತ್ಯಗಳನ್ನು ಪೂರೈಸಲು ಸಾಕಾಗುವುದಲ್ಲ. ಆದಕ್ಕಾಗಿ ಅರಣ್ಯ ಇಲಾಖೆಯವರು ರಕ್ಷಿತ ಪ್ರದೇಶದಲ್ಲಿ ಸ್ಥಳೀಯ ಜನರಿಗೆ ಮೀನು ಹಿಡಿಯಲು, ಜೇನು ಸಂಗ್ರಹಿಸಲು ಮತ್ತು ಮರ ಕಡಿಯಲು ಅನುಮತಿಯನ್ನು ಕೊಡುತ್ತಾರೆ.

ಆದರೆ ಸ್ಥಳೀಯ ಜನರಲ್ಲಿ ಅನೇಕರು ಅನುಮತಿ ಪಡೆದಾದ ನಂತರ ಕಾಡಿನಲ್ಲಿ ಅಕ್ರಮವಾಗಿ ಬೇಟೆಯಾಡುತ್ತಾ, ಕಳ್ಳತನ ಮಾಡುತ್ತಾ ಮತ್ತು ದರೋಡೆ ಮಾಡುತ್ತಾ ಜೀವನ ಸಾಗಿಸುತ್ತಾರೆ ಇತ್ತೀಚೆಗೆ ಈ ವಿಷಯವಾಗಿ ಒಂದು ಅಧ್ಯಯನವನ್ನು ನಡೆಸಲಾಯಿತು. ಈ ಅಧ್ಯಯನದ ಪ್ರಕಾರ ಈ ಎಲ್ಲ ಅಕ್ರಮ ವ್ಯವಹಾರಗಳು ಸುಂದರ್‌ಬನ್ಸ್ ಪ್ರದೇಶದಲ್ಲಿಯ ಜನರ ಒಂದು ಗೃಹೋದ್ಯೋಗವೇ ಆಗಿದೆ ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ ಎಂದು ತಿಳಿದು ಬಂದಿದೆ. ಆದರೆ ಅತ್ಯಂತ ಕಳವಳಕಾರಿ ಸಂಗತಿಯೇನೆಂದರೆ ಅವರಲ್ಲಿ ಬಹಳಷ್ಟು ಜನರು ಹಿಂದೊಮ್ಮೆ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಹೊಂದಿದ್ದ ಶ್ರೀಮಂತಿಕೆಯ ಕಾರಣದಿಂದಾಗಿ ಅವರನ್ನು ದುಷ್ಕರ್ಮಿಗಳೆಂದು ಕರೆಯಲು ಸಾಧ್ಯವಾಗಿಲ್ಲ. ಅವರು ಸ್ಥಳೀಯ ಜನರ ಜೊತೆಗೆ ಬೆರೆಯುತ್ತಾರೆ ಮತ್ತು ಶಾಂತಿಯುತ ಸಹಜೀವನ ನಡೆಸುತ್ತಾರೆ. ಇಡೀ ಸುಂದರಬನವು ಸಮೃದ್ಧವಾದ ವನ್ಯ ಸಂಪತ್ತಿನಿಂದಲೂ, ಜೀವಸಂಪತ್ತಿನಿಂದಲೂ ಕೂಡಿದೆ. ೧೯೮೭ ರಲ್ಲಿ ಈ ಕ್ಷೇತ್ರವನ್ನು ವಿಶ್ವ ಸಾಂಸ್ಕೃತಿಕ ಕ್ಷೇತ್ರವೆಂದು ಘೋಷಿಸಲಾಯಿತಾದರೂ ಪ್ರಕೃತಿಯಲ್ಲಿಯ ಸಿರಿವಂತಿಕೆ ಆ ಪ್ರದೇಶದ ಸಾಮಾಜಿಕ – ಆರ್ಥಿಕ ಜೀವನದ ಮೇಲೆ ಯಾವ ಪರಿಣಾಮವನ್ನೂ ಉಂಟು

ವ್ಯಕ್ತಿಗಳು ತಮ್ಮದೇ ಮಿತಿಗಳನ್ನರಿತುಕೊಂಡು ಅವುಗಳಿಂದ ಹೊರಬರುವ ಹಾಗೂ ಇತರರನ್ನು ಪರಿಗಣಿಸುವ ಪ್ರಕ್ರಿಯೆಗೆ ಅವು ಸೂಕ್ತ ಭೂಮಿಕೆಯನ್ನೊದಗಿಸುತ್ತವೆ. ವ್ಯಕ್ತಿಯ ಪ್ರಕಾಶವನ್ನು ಅವನ ಮೇಲೇ ಪ್ರತಿಫಲಿಸುವ ಕನ್ನಡಿಗಳಿವು: ಆದರೆ ಈ ಕನ್ನಡಿಗಳನ್ನು ನಿರ್ಮಿಸುವುದೂ ವ್ಯಕ್ತಿಯ ಅಂತಃಸ್ಫುರಣವೇ. ಭಾಷೆ, ಕಾವ್ಯ, ರಾಜ್ಯಾಂಗ, ಕಾನೂನು, ಕಲೆ, ವಿಜ್ಞಾನ ಎಲ್ಲವೂ ಮಾನವನ ಅಂತಃಸ್ಫೂರ್ತಿಜನ್ಯವೇ ಆದರೂ ನಮಗೆ ಅವು ಕರತಲಾಮಲಕವಾಗು ತನಕ ಪರಕೀಯತೆ ಮುದ್ದಣ, ಪೆಕಾಲೆ, ಮ್ಯಾಕ್ಸ್‌ಮುಲ್ಲರ್, ಮಹಾತ್ಮಾಗಾಂಧಿ, ಐನ್‌ಸ್ಟೈನ್ ಎಲ್ಲರಿಗೂ ಅಂತಃಸ್ಫುರಣದ ಅಭಿವ್ಯಕ್ತಿಗೆ ಮೂಲಶಿಕ್ಷಣ ಮತ್ತು ಶಿಷ್ಟ ಸಂಪ್ರದಾಯಗಳೇ ತಳಹದಿಯಾಗಿದ್ದುವು ತಾನೆ? ಅಂತಹ ತಳಹದಿಯ ಮೇಲೆ ನಿಲ್ಲದ ದಿಢೀರ್ ಅಂತಃಸ್ಫುರಣಕ್ಕೆ ಮೂಲಭೂತ ಬೆಲೆಯೇ ಇಲ್ಲವಾಗುತ್ತದೆ. ಸಮಾಜದ ರಚನೆಗಳು ವ್ಯಕ್ತಿಗೆ ಪರಕೀಯವಾದರೂ, ಅವು ಇತ್ಯಾತ್ಮಕ ಅಭಿವ್ಯಕ್ತಿಗಳು ಮತ್ತು ಅರ್ಥವತ್ತಾದ ಉತ್ಪಾದನೆಗಳು ಎಂಬುದನ್ನು ಅಲ್ಲಗಳೆಯಲಾಗದು – ಇನ್ನೊಂದು ಅರ್ಥದಲ್ಲಿ ಅವು ಸ್ವತಂತ್ರ ಮಾನವನ ವಿಕ್ಷಿಪ್ತತೆಗಳಾಗಿದ್ದರೂ ಸಹ.

ಪರಕೀಯವೆನಿಸುವ ಸಂಗತಿಗಳ ಬಗ್ಗೆ ವಿರೋಧ ಸಹಜವೇ. ಕಳ್ಳತನಕ್ಕೆ ಹೊರಡುವವನು ಚಂದ್ರನನ್ನು ದ್ವೇಷಿಸಿದರೂ, ಅದರ ಅಪ್ರಯೋಜಕತೆಯನ್ನರಿತು ಚಂದ್ರನಿಲ್ಲದ ದಿನಗಳನ್ನೇ ಆರಿಸಿಕೊಳ್ಳುವಂತೆ, ಯಾವುದರೆದುರು ನಾವು ಏನೂ ಮಾಡಲಾರೆವೋ ಆ ಪ್ರಕೃತಿಯ ಸಂಗತಿ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತೇವೆ. ಆದರೆ ಮಾನವನಿರ್ಮಿತ ರಚನೆಗಳು ಅತಿರಿಕ್ತವಾಗಿ ಪರಣಮಿಸಿ ಅನ್ಯವಾದಾಗ ಅವುಗಳನ್ನು ವಿರೋಧಿಸುವದರಲ್ಲಿ ತಪ್ಪೇನಿಲ್ಲ. ಉದಾಹರಣೆಗೆ, ಪ್ರಜಾಪ್ರಭುತ್ವದ ಛತ್ರದಡಿ ಸರ್ವಾಧಿಕಾರ ನಾವೇ ಆರಿಸಿದ ಪ್ರತಿನಿಧಿಗಳು ನಮಗೇ ಅತಿರಿಕ್ತರಾಗಿ ಪರಕೀಯರಾಗುವುದು. ಸಮಾಜದ ವಿರೋಧ ಆಗ ಸ್ವಾಗತಾರ್ಹ! ಬಹುಜನರನ್ನು ಅನ್ಯರನ್ನಾಗಿಸಿ, ಅವರು ಒಪ್ಪಿರುವ ರಾಜ್ಯಾಂಗವನ್ನು ಅಪಮಾರ್ಗಕ್ಕೆಳೆಸುವ ಅಂಥ ವೈಯಕ್ತಿಕ ಅತಿರಿಕ್ತವನ್ನು ವಿರೋಧಿಸುವುದು ಕರ್ತವ್ಯವೇ ಹೌದು; ರಾಜ್ಯಾಂಗವನ್ನು ಕಟ್ಟುವಷ್ಟೇ ರಚನಾತ್ಮಕವೂ ಹೌದು.

ಹೀಗೆ ಇತರರು ನಮ್ಮನ್ನು ಪರಿಕೀಯರನ್ನಾಗಿಸಲು ಅವಕಾಶವಿಲ್ಲದಂತೆ ನಾವೇ ನಮ್ಮ ಅನ್ಯತೆ ವೈಯಕ್ತಿಕತೆಗಳನ್ನು ಸಾಮಾಜಿಕ ರಚನೆಯ ಚೌಕಟ್ಟಿನೊಳಗೇ ಕಾಯ್ದುಕೊಳ್ಳಬೇಕಾಗುತ್ತದೆ. ಅಂತೆಯೇ ಅಂತರಂಗವು ಅಪಮಾರ್ಗ ಹಿಡಿಯದಂತೆ ಅಂತಃಸ್ಫುರಣವನ್ನೂ ಸಹ. ಸಂಘಸಂಸ್ಥೆಗಳಿಗೆ ಅವನ್ನು ನಡೆಸುವ ಪದಾಧಿಕಾರಿಗಳಿಗಿಂತ ಭಿನ್ನವಾದ ವ್ಯಕ್ತಿತ್ವ ಇರಲಾರದು. "ಸಂಘೇ

ಶಕ್ತಿಃ ಕಲೌ ಯುಗೇ" ಎಂಬುದನ್ನನುಸರಿಸಿ ಆ ಸಂಘದ ಬಲವನ್ನು ಬಳಸಿಕೊಂಡು ಅವರು ಇತರರಿಗಿಂತ ಹೆಚ್ಚು ಕ್ರೂರ ಶೋಷಕರಾಗುವ ಸಾಧ್ಯತೆಯಿದೆ: ಉದಾಹರಣೆಗಳು ಬೇಕಾದಷ್ಟಿವೆ. ಸಾಮಾನ್ಯವಾಗಿ ಜನರನ್ನು (ಅಪರೂಪವಾಗಿ ಇಡಿಯ ಸಂಘವನ್ನೇ ಸಮಾಜದಲ್ಲಿ) ಪರಕೀಯಗೊಳಿಸುವ ಇಂಥವರನ್ನು ನಿಯಂತ್ರಿಸುವುದು ಯಾರೊಬ್ಬರಿಗೂ ಕಷ್ಟವೇ. ಇವರಿಂದಾಗಿ ಸಂಘಕ್ಕೂ ಸಮಾಜಕ್ಕೂ ನಡುವಣ ಬಿರುಕು ದಿನದಿನಕ್ಕೂ ದೊಡ್ಡದಾಗುತ್ತ ಹೋಗುತ್ತದೆ. ಇವರಿಂದಾಗಿ ಸಂಘಕ್ಕೆ ಆರೋಪಿಸಲ್ಪಡುವ ಈ ಕಾಠಿಣ್ಯವನ್ನು ನಾವು ವಿರೋಧಿಸಬೇಕೇ ಹೊರತು ಸಂಘದ ರಚನೆಯನ್ನೇ ಅಲ್ಲ. ವ್ಯಕ್ತಿಗೂ ಸಂಘಕ್ಕೂ ನಡುವೆ ಇರುವ ಸಹಜ ಪರಕೀಯತೆಯನ್ನು ಹೆಚ್ಚಿಸುವುದು ಈ ಕಾಠಿಣ್ಯ.

ಕೊನೆಯದಾಗಿ, ಈ ಪರಕೀಯತೆಯು ವ್ಯಕ್ತಿಯ ಭಾವ ಪರವಶತೆಯ ಒಂದು ರೂಪಾಂತರವೂ ಆಗಿರುವುದು ಸಾಧ್ಯ. ತನ್ನ ಸಹಜ ಮಿತಿಯನ್ನು ಮೀರಿ ಹೋಗುವ ವ್ಯಕ್ತಿಗೆ ಇಂಥ ಸ್ಥಿತಿ ಪ್ರಾಪ್ತವಾಗಬಹುದು. ಭೌತಾತೀತ ದೃಷ್ಟಿಯಲ್ಲಿ ಇಂಥ ಪರಕೀಯತೆಯು ಪ್ರಾಪಂಚಿಕತೆಯಿಂದ ಬೇರ್ಪಟ್ಟು ದೈವ ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಲಕ್ಷಣವೂ ಆಗಿರಬಹುದು. ಅಥವಾ ಲೌಕಿಕ ದೃಷ್ಟಿಯಲ್ಲಿ ಇದು ವ್ಯಕ್ತಿಗೆ ತನ್ನ ನಂಬಿಕೆಗಳ ಮೇಲಣ, ತಾನು ಕಟ್ಟಿ ಬೆಳೆಸಿದ ಅಥವಾ ಸೇರಿ ಒಂದಾಗಿರುವ ಸಂಘದ ಮೇಲಣ ಭಾವತೀವ್ರತೆ ಅಥವಾ ಭಾವಾವೇಶವೂ ಆಗಿರಬಹುದು. ಅದ್ವೈತದೃಷ್ಟಿಯಲ್ಲಿ ಅದು ತನ್ನ ಅಂತರಾತ್ಮದೊಂದಿಗೆ ಏಕೀಭವಿಸುವುದರಿಂದ ಉಂಟಾಗಿರಬಹುದು. ಭಕ್ತಿಭಾವದ ದೃಷ್ಟಿಯಲ್ಲಿ ಅದು ಅತೀತವಾದೊಂದು ವಿಶ್ವಚೈತನ್ಯದೊಂದಿಗೆ ಐಕ್ಯಹೊಂದಿದ್ದರಿಂದ ಉಂಟಾಗಿರಬಹುದು; ಇತ್ಯಾದಿ. ಸಂಕುಚಿತ ಸಾಮಾಜಿಕ ದೃಷ್ಟಿಯಿಂದ ಇದನ್ನು ಪರಕೀಯತೆ ಎಂದು ಪರಿಗಣಿಸ ಬಹುದಾದರೂ ವ್ಯಕ್ತಿಯ ದೃಷ್ಟಿಯಿಂದ ಹಾಗೆ ಹೇಳುವಂತಿಲ್ಲ. ಏಕೆಂದರೆ ಇಲ್ಲಿ ವ್ಯಕ್ತಿಗೆ ಪರಕೀಯ ಪ್ರಜ್ಞೆ ಇರುವುದಿಲ್ಲ. ಇಂತಹ ಭಾವನಾತ್ಮಕ ಪರಕೀಯತೆಯನ್ನು ಸಾಮಾಜಿಕ ಪರಿಸ್ಥಿತಿಯಲ್ಲಿ ಅನ್ವಯಿಸಲು ಬರುವುದಿಲ್ಲ – ಏಕೆಂದರೆ ಯಾವುದೇ ಸಾಮಾಜಿಕ ರಚನೆಯ ವ್ಯಕ್ತಿಸಮುದಾಯವು ಇಂಥದೊಂದು ಐಕ್ಯವನ್ನು ಹೊಂದುವುದು ಅಸಾಧ್ಯ. ★

('ವಿವೇಕ ಪ್ರಭ' ದ ಸಾಭಾರ)

ಕಳ್ಳತನಕ್ಕಾಗಿಯೇ ಹುಟ್ಟಿದ್ದು!

(ಸುಂದರ ಬನ್ಸ್ ಪರಿಸರದ ಕಥೆ ಮತ್ತು ವ್ಯಥೆ)

ಓರ್ವ ಸುಪ್ರಸಿದ್ಧ ಜರ್ಮನ್ ತತ್ವಜ್ಞಾನಿಯು ಒಮ್ಮೆ ಹೀಗೆ ಹೇಳಿದ, "ಬಡತನ ಒಂದು ಕಳ್ಳತನ". ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದ ಆಧುನಿಕ ಕಾನೂನುಗಳನ್ನು ಗಮನಿಸಿದಾಗ ಈ ಅಭಿಪ್ರಾಯವು ತುಸು ಆಶ್ಚರ್ಯಕರವೆಂದೆನಿಸುತ್ತದೆ. ಆದರೆ ವಿಚಿತ್ರ ಸಂಗತಿ ಏನೆಂದರೆ ಬಂಗಾಳರಾಜ್ಯದಲ್ಲಿಯ ರಾಷ್ಟ್ರೀಯ ಉದ್ಯಾನವನವಾದ 'ಸುಂದರಬನ್ಸ್'ನ ಸ್ಥಳೀಯ ಆಡಳಿತವು ಜರ್ಮನ್ ತತ್ವಜ್ಞಾನಿಯ ಈ ಅಭಿಪ್ರಾಯವನ್ನು ಪುಷ್ಟೀಕರಿಸುವಂತೆ ಕಾಣುತ್ತಿದೆ. ಸ್ಥಳೀಯ ಜನರು ಯಾವ ಸ್ಥಳೀಯ ಯುವಕರನ್ನು ಸಮಾಜ ಘಾತುಕರೆಂದು ಕರೆಯುತ್ತಿದ್ದಾರೋ ಅವರು ತಮ್ಮ ಕಳ್ಳತನದ ಉದ್ಯೋಗವನ್ನು ಕಾನೂನು ರಕ್ಷಕರಿಂದ ಯಾವುದೇ ವಿರೋಧವಿಲ್ಲದೆ ರಾಜಾರೋಷವಾಗಿ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಏಕೆಂದರೆ ವಲಸೆ ಬರುತ್ತಿರುವ ಜನರ ಕಾರಣದಿಂದಾಗಿ ಮತ್ತು ಜನಸಂಖ್ಯೆಯ ಹೆಚ್ಚಳದಿಂದಾಗಿ ಆದಾಯದ ಸಂಪನ್ಮೂಲಗಳು ಇಲ್ಲದಂತಾಗುತ್ತಿರುವಾಗ ಸ್ಥಳೀಯ ಯುವಕರು ತಮ್ಮ ಬದುಕಿನ ನಿರ್ವಹಣೆಗಾಗಿ ಬೇರೆ ಏನುತಾನೇ ಮಾಡಬಲ್ಲರು?

೧೯೮೪ರಲ್ಲಿ ಭಾರತ ಸರ್ಕಾರವು ಸುಂದರ್‌ಬನ್ಸ್ ಒಂದು ರಾಷ್ಟ್ರೀಯ ವನವೆಂದು ಘೋಷಿಸಿತು. ಇದು ಪ್ರಪಂಚದಲ್ಲಿಯೆ ಅತ್ಯಂತ ವಿಶಾಲವಾದ ಮ್ಯಾನ್‌ಗ್ರೋವ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಮೊದಲು ಇದ್ದ ಮ್ಯಾನ್ ಗ್ರೋವ್ ಪ್ರದೇಶವನ್ನು ಪುನರ್ ವಶೀಕರಿಸಿಕೊಳ್ಳಲಾಯಿತು ಮತ್ತು ಈಗ ಸುಂದರ್ ಬನ್ಸ್‌ನ ಮ್ಯಾನ್‌ಗ್ರೋವ್ ಕಾಡಿನ ಒಟ್ಟು ವಿಸ್ತಾರ ೪೦೦೦ ಚದುರ ಕಿ.ಲೋ ಮೀಟರ್ ಇದೆ. ಈ ಪ್ರದೇಶವು ಭಾರತ ಮತ್ತು ಬಾಂಗ್ಲಾದೇಶ ಎರಡು ದೇಶಗಳಲ್ಲಿಯೂ ಚಾಚಿದೆ. ಭಾರತದಲ್ಲಿ ಪುನರ್ ವಶೀಕರಿಸಿಕೊಳ್ಳಲಾದ ಭೂಪ್ರದೇಶದ ಕ್ಷೇತ್ರ ಫಲ ೫೫೦೦ ಚದುರ ಕಿ.ಲೋ. ಮೀಟರ್ ಇದೆ. ಇದು ವಿಶ್ವದ ವಿಖ್ಯಾತ ವನ. ವಿಶ್ವದ ಅತ್ಯಂತ ವಿಶಾಲವಾದ ಪರಿಸರ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಪ್ರಸಿದ್ಧ ರಾಯಲ್ ಬೆಂಗಾಲ್ ಹುಲಿಗಳ ತಾಣವಾಗಿದೆ. ಹಾರುವ ಮೀನುಗಳು, ಉಪ್ಪು ನೀರಿನ ಮೊಸಳೆಗಳು, ಸಾಲ್ವೆಡಾರ್ ಹೆಂಟೆಗೊದ್ದಗಳು, ನಳ್ಳಿಗಳು ಮತ್ತು ಆಮೆಗಳು ಮುಂತಾದ ಜಲಚರಗಳಿಗೆ ತಾಣವೆಂದೂ ಪ್ರಸಿದ್ಧವಾಗಿರುವ ಸುಂದರಬನ್ಸ್‌ನ್ನು ಪ್ರವಾಸಿಗರ ಆಕರ್ಷಕ ಕ್ಷೇತ್ರವನ್ನಾಗಿ ಹಾಗೂ ತನ್ಮೂಲಕ ಆ ಪ್ರದೇಶದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕೆಲಸ ಇನ್ನೂ ಬಹಳಷ್ಟು

ಇದೆ. ಇಡೀ ಪ್ರದೇಶವೇ ಕಡು ಬಡತನ ಮತ್ತು ಅತಿ ಹಸಿವಿನಿಂದ ಕಂಗಾಲಾಗಿದೆ. ಪ್ರವಾಸಿಗರಿಗೆ ಚಿರತೆಗಳು, ಹೆಣ್ಣು ಹುಲಿಗಳು ಮತ್ತು ಮನುಷ್ಯರನ್ನು ರನ್ನು ಬೇಟೆಯಾಡುವ ಬೆಂಗಾಲ್ ಹುಲಿಗಳು ಆಕರ್ಷಣೆಯ ಮುಖ್ಯ ಮೂಲಗಳಾಗಿವೆ. ೭೦ರ ಪ್ರಾರಂಭಿಕ ದಶಕಗಳಲ್ಲಿ ರಾಯಲ್ ಬೆಂಗಾಲ್ ಹುಲಿಗಳ ಸಂಖ್ಯೆ ಸುಮಾರು ೧೫೦ ಮಾತ್ರ ಇತ್ತು. ೧೦ ವರ್ಷಗಳ ನಂತರ ಆ ಸಂಖ್ಯೆಯು ೨೬೪ಕ್ಕೆ ಏರಿತು. ಹೊರಗಿನವರಿಗೆ ಆ ಪ್ರದೇಶವು ವಿಶಿಷ್ಟವಾದ ವನ್ಯ ಜೀವಿಗಳ ಒಂದು ಸಂಗ್ರಹವಾಗಿಯೂ ಮತ್ತು ಪ್ರಕೃತಿ ಪ್ರೇಮಿಗಳಿಗೆ ಒಂದು ಗಣಿಯಾಗಿಯೂ ತೋರುತ್ತದೆ. ಆದರೆ ಆ ಪ್ರದೇಶದ ಒಳಗಿರುವ ಜನರಿಗೆ ಆ ಇಡೀ ಪ್ರದೇಶವು ಬಡತನದಿಂದ ತೊಳಲುತ್ತಿದೆ ಮತ್ತು ಆದಾಯದ ಯಾವ ಮೂಲಗಳೇ ಇಲ್ಲದಂಥ ಪ್ರದೇಶವಾಗಿದೆ. ಇದರ ಪರಿಣಾಮವಾಗಿ ಬಹಳಷ್ಟು ಯುವಕರು ತಮ್ಮ ಜೀವನ ನಿರ್ವಹಣೆಗಾಗಿ ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ವರ್ಷದಲ್ಲಿ ಒಂದು ಬೆಳೆಯನ್ನು ಮಾತ್ರ ಬೆಳೆಯಬಹುದಾದ ಪುನರ್‌ವಶೀಕೃತ ಸುಂದರ್‌ಬನ್ಸ್ ಭೂಮಿಯು ಸ್ಥಳೀಯ ಜನರ ಜೀವನದ ಅಗತ್ಯಗಳನ್ನು ಪೂರೈಸಲು ಸಾಕಾಗುವುದಲ್ಲ. ಅದಕ್ಕಾಗಿ ಅರಣ್ಯ ಇಲಾಖೆಯವರು ರಕ್ಷಿತ ಪ್ರದೇಶದಲ್ಲಿ ಸ್ಥಳೀಯ ಜನರಿಗೆ ಮೀನು ಹಿಡಿಯಲು, ಜೇನು ಸಂಗ್ರಹಿಸಲು ಮತ್ತು ಮರ ಕಡಿಯಲು ಅನುಮತಿಯನ್ನು ಕೊಡುತ್ತಾರೆ.

ಆದರೆ ಸ್ಥಳೀಯ ಜನರಲ್ಲಿ ಅನೇಕರು ಅನುಮತಿ ಪಡೆದಾದ ನಂತರ ಕಾಡಿನಲ್ಲಿ ಅಕ್ರಮವಾಗಿ ಬೇಟೆಯಾಡುತ್ತಾ, ಕಳ್ಳತನ ಮಾಡುತ್ತಾ ಮತ್ತು ದರೋಡೆ ಮಾಡುತ್ತಾ ಜೀವನ ಸಾಗಿಸುತ್ತಾರೆ ಇತ್ತೀಚೆಗೆ ಈ ವಿಷಯವಾಗಿ ಒಂದು ಅಧ್ಯಯನವನ್ನು ನಡೆಸಲಾಯಿತು. ಈ ಅಧ್ಯಯನದ ಪ್ರಕಾರ ಈ ಎಲ್ಲ ಅಕ್ರಮ ವ್ಯವಹಾರಗಳು ಸುಂದರ್‌ಬನ್ಸ್ ಪ್ರದೇಶದಲ್ಲಿಯ ಜನರ ಒಂದು ಗೃಹೋದ್ಯೋಗವೇ ಆಗಿದೆ ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ ಎಂದು ತಿಳಿದು ಬಂದಿದೆ. ಆದರೆ ಅತ್ಯಂತ ಕಳವಳಕಾರಿ ಸಂಗತಿಯೇನೆಂದರೆ ಅವರಲ್ಲಿ ಬಹಳಷ್ಟು ಜನರು ಹಿಂದೊಮ್ಮೆ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಅಷ್ಟರು ಹೊಂದಿದ್ದ ಶ್ರೀಮಂತಿಕೆಯ ಕಾರಣದಿಂದಾಗಿ ಅವರನ್ನು ದುಷ್ಕರ್ಮಿಗಳೆಂದು ಕರೆಯಲು ಸಾಧ್ಯವಾಗಿಲ್ಲ. ಅವರು ಸ್ಥಳೀಯ ಜನರ ಜೊತೆಗೆ ಬೆರೆಯುತ್ತಾರೆ ಮತ್ತು ಶಾಂತಿಯುತ ಸಹಜೀವನ ನಡೆಸುತ್ತಾರೆ. ಇಡೀ ಸುಂದರಬನವು ಸಮೃದ್ಧವಾದ ವನ್ಯ ಸಂಪತ್ತಿನಿಂದಲೂ, ಜೀವಸಂಪತ್ತಿನಿಂದಲೂ ಕೂಡಿದೆ. ೧೯೮೭ರಲ್ಲಿ ಈ ಕ್ಷೇತ್ರವನ್ನು ವಿಶ್ವ ಸಾಂಸ್ಕೃತಿಕ ಕ್ಷೇತ್ರವೆಂದು ಘೋಷಿಸಲಾಯಿತಾದರೂ ಪ್ರಕೃತಿಯಲ್ಲಿಯ ಸಿರಿವಂತಿಕೆ ಆ ಪ್ರದೇಶದ ಸಾಮಾಜಿಕ – ಆರ್ಥಿಕ ಜೀವನದ ಮೇಲೆ ಯಾವ ಪರಿಣಾಮವನ್ನೂ ಉಂಟು

ಮಾಡಲಿಲ್ಲ. ಈ ಪ್ರದೇಶವು ಪ್ರವಾಸಿಗರಿಗೆ ಮತ್ತು ಪ್ರಕೃತಿ ಪ್ರೇಮಿಗಳಿಗೆ ಅತ್ಯಂತ ಪ್ರಿಯವಾದ ತಾಣವಾಗಿದೆಯಾದರೂ ಈ ಪ್ರದೇಶದಲ್ಲಿರುವ ಹಳ್ಳಿಗರಲ್ಲಿ ಹೆಚ್ಚು ಜನರು ಅಕ್ರಮ ಚಟುವಟಿಕೆಗಳಿಂದಲೇ ಜೀವನ ನಡೆಸುತ್ತಿದ್ದಾರೆ. ಸಂಪಾದನೆಗಾಗಿ ಯಾವ ಬೇರೆ ಮಾರ್ಗ ಇಲ್ಲದೇ ಇರುವಾಗ ಬೇರೆ ಏನು ತಾನೇ ಮಾಡಲು ಸಾಧ್ಯ" ಎಂಬುದಾಗಿ ಸ್ಥಳೀಯ ಯುವಕರು ಕೇಳುತ್ತಾರೆ. ಸಾಕಷ್ಟು ನೀರಾವರಿ ವ್ಯವಸ್ಥೆ ಇಲ್ಲದಿರುವಿಕೆ ಮತ್ತು ಹಳ್ಳಿಗರಲ್ಲಿಯ ಬಡತನ ಎರಡೂ ಸೇರಿ ಹಳೆಯ ಕಾಲದ ವ್ಯವಸಾಯ ಪದ್ಧತಿಯನ್ನೇ ಅವರು ಅವಲಂಬಿಸಿ ದ್ದಾರೆ. ಈ ಪದ್ಧತಿಯಲ್ಲಿ ಇಳುವರಿ ಅತ್ಯಂತ ಕಡಿಮೆ. ಇಲ್ಲಿಯ ಜನರ ಸಾಕ್ಷರತೆಯ ಪ್ರಮಾಣ ಪುರುಷರಲ್ಲಿ ಶೇಕಡಾ ೫೦ ಇದ್ದರೆ. ಮಹಿಳೆಯರಲ್ಲಿ ಶೇಕಡಾ ೧೬ ರಷ್ಟು ಇದೆ. ಸುಂದರಬನ್ ಪ್ರದೇಶವು ದೇಶದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಇಲ್ಲಿ ವಿದ್ಯುತ್ ಸರಬರಾಜು ಸಹ ಇಲ್ಲ. ಈ ಪ್ರದೇಶವು ರಾಜಧಾನಿ ಕಲ್ಕತ್ತಯಿಂದ ಕೇವಲ ೧೦೦ ಕಿಲೋ. ಮೀಟರ್ ಮಾತ್ರ ದೂರವಿದೆ. ಆದರೆ ರಸ್ತೆಗಳ ಅಭಾವ ಮತ್ತು ದುರವಸ್ಥೆಗಳ ಕಾರಣ ದಿಂದ ಕಲ್ಕತ್ತೆಯನ್ನು ತಲುಪಲು ೭ ರಿಂದ ೮ ಗಂಟೆಗಳ ಕಾಲ ಸಮಯ ಬೇಕಾ ಗುತ್ತದೆ. ಈಗ ಸುಂದರಬನ್ ಪ್ರದೇಶದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಒಂದು ಅಣುಸ್ಥಾವರವನ್ನು ಸ್ಥಾಪಿಸಬೇಕೆಂದು ಪ್ರಯತ್ನ ನಡೆದಿದೆ. ಆದರೆ ಈ ಅಣು ಸ್ಥಾವರದ ಸ್ಥಾಪನೆಯಿಂದಾಗಿ ಸುಂದರಬನ್‌ದ ಪರಿಸರದ ಮೇಲೆ ದುಷ್ಪ ಪರಿಣಾಮವುಂಟಾಗುದೆಂಬ ಭೀತಿಯಿಂದ ಅಲ್ಲಿಯ ಕೆಲ ಪರಿಸರವಾದಿಗಳು ಈ ಯೋಜನೆಯನ್ನು ಪ್ರತಿಭಟಿಸುತ್ತಿದ್ದಾರೆ. ಆದರೆ, ತಮ್ಮ ಪ್ರದೇಶ ಅಭಿವೃದ್ಧಿ ಗೊಳ್ಳಬೇಕಾದರೆ ಈ ಯೋಜನೆ ಅಗತ್ಯವೆಂದು ಸ್ಥಳೀಯರ ಅಭಿಪ್ರಾಯವಾಗಿದೆ.

ಸರ್. ಡೆನಿಯಲ್ ಹೆಮಿಲ್ಟಿನ್ ಅವರ ಸೇವೆ.

ಸ್ಕಾಟ್‌ಲೆಂಡ್ ದೇಶದಿಂದ ಸರ್. ಡೇನಿಯಲ್ ಹೆಮಿಲ್ಟನ್ ಎಂಬುವರು ಸುಂದರಬನಕ್ಕೆ ಬಂದರು. ೧.೫೨.೦೦೦ ಎಕರೆಗಳಷ್ಟು ವಿಸ್ತಾರವಾದ ಪ್ರದೇಶ ದಲ್ಲಿ ತಮ್ಮ ಇಸ್ಟೇಟನ್ನು ಸ್ಥಾಪಿಸಿದರು. ಅವರು ಸ್ಥಳೀಯ ಜನರಿಗೆ ಸಹಕಾರ ಆಂದೋಲನವನ್ನು ಪರಿಚಯಿಸಿದರು. ಈ ಆಂದೋಲನಕ್ಕೆ ಎಡಪಂಥೀಯ ಕಮ್ಯೂನಿಸ್ಟ್ ಪಕ್ಷಗಳು ಬೆಂಬಲವನ್ನು ಕೊಟ್ಟವು. ಹೆಮಿಲ್ಟನ್ ಸಹಕಾರಿ ಬ್ಯಾಂಕನ್ನು, ಆರೋಗ್ಯ ಕೇಂದ್ರಗಳನ್ನು, ಶಾಲೆಗಳನ್ನು, ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ಮಿಸಿದರು. ಈ ಕ್ಷೇತ್ರದಲ್ಲಿ ಒಂದು ಕೃಷಿ ವಿಶ್ವ ವಿದ್ಯಾಲಯವನ್ನು ಸ್ಥಾಪಿಸ ಬೇಕೆಂಬುದು ಅವರ ಕನಸಾಗಿತ್ತು. ಆದರೆ ಹೆಮಿಲ್ಟನ್ನರ ಅಕಾಲಿಕ ಮರಣದಿಂದಾಗಿ ಅವರ ಅನೇಕ ಕನಸುಗಳು ನನಸಾಗದೇ ಉಳಿದವು. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಹೆಮಿಲ್ಟನ್ನರ ಆ ಇಡೀ ಇಸ್ಟೇಟನ್ನು ರಾಜ್ಯ ಸರ್ಕಾರ ವಹಿಸಿಕೊಂಡಿತು.

(ಮೇನ್ ಸ್ಟ್ರೀಮ್ ಸಾಭಾರ) ಅನು : ಸು.ಕೌ.

KA-SKMND-470/-2000. ಶರದ-ಅಂಚೆ

Regd No: KAR/KAN/2000/3820

Vol 2 Issue 9,

Janapada Vichara - Kannada Monthly Digest. Edited Printed and Published by Surendra Koulagi, at Janapada Seva Trust Printing Press. Melkote on behalf of Janapada Seva Trust (Regd) Melkote. Dist - Mandya 571 431.

Phone : 0823/648754